# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 28, 2020

ಸಂಪುಟ : 47 ಸಂಚಿಕೆ : 139 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




## ಇಂದು ಬಂದ್ ಕರೆ : ಬೈಕ್ ರ್ಯಾಲಿ

ದಾವಣಗೆರೆ, ಸೆ.27 - ಎಪಿಎಂಸಿ ಕಾಯ್ದೆ, ಭೂ ಸುಧಾರಣೆ ಕಾಯ್ದೆ ಸೇರಿದಂತೆ ರೈತ ಹಾಗೂ ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ವಿರೋಧಿಸಿ, ನಾಳೆ ಸೋಮವಾರ ಕರೆದಿರುವ ಕರ್ನಾ ಟಕ ಬಂದ್ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನಗರದಲ್ಲಿ ಇಂದು ರೈತ ಹಾಗೂ ಕಾರ್ಮಿಕ ಸಂಘಟನೆಗಳಿಂದ ಮೋಟಾರ್ ಬೈಕ್ ರ್ಯಾಲಿ ನಡೆಸಲಾಯಿತು.

**ರೈತ ಸಂಘಟನೆಗಳ ಬಂದ್ ಕರೆಗೆ ಕನ್ನಡ ಪರ ಸಂಘಟನೆಗಳು, ಕಾಂಗ್ರೆಸ್, ಜೆಡಿಎಸ್ ಬೆಂಬಲ**

ಸಿಪಿಐ, ಕಿಸಾನ್ ಸಭಾ, ರೈತ ಪರ ಸಂಘಟನೆಗಳು ಸೇರಿ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ದಾವಣಗೆರೆ ಬಂದ್ ಪೂರ್ವ ಭಾವಿಯಾಗಿ ಬೈಕ್ ರ್ಯಾಲಿ ನಡೆಸಿ ಸರ್ಕಾರದ ಗಮನ ಸೆಳೆಯಲಾಯಿತು.

ಶ್ರೀ ಜಯದೇವ ಮುರುಘಾ ರಾಜೇಂದ್ರ ವೃತ್ತದಿಂದ ಪ್ರಾರಂಭಗೊಂಡ ರ್ಯಾಲಿಯು ಕುವೆಂಪು ರಸ್ತೆ ಮೂಲಕ ಪಿ.ಬಿ.ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಒಳಗಡೆ ಹೋಗಿ ಎಪಿಎಂಸಿ ಸೇತುವೆ ಮೂಲಕ ಬಂಬೂ ಬಜಾರ್, ಬೇತೂರು ರಸ್ತೆ, ಅರಳಿ ಮರ, ಜಗಳೂರು ಬಸ್ ನಿಲ್ದಾಣ ರಸ್ತೆ, ಮಂಡಿಪೇಟೆ ರಸ್ತೆ, ಹೊಂಡದ ವೃತ್ತದ ಮುಖಾಂತರ ಶಿವಾಲಿ ಚಿತ್ರಮಂದಿರ, ಹೊಸ ಕೋರ್ಟ್, ಪಿಬಿ ರಸ್ತೆಯಿಂದ ಜಿಲ್ಲಾಧಿಕಾರಿ ಮನೆ ರಸ್ತೆ ಮೂಲಕ ಎಸ್.ನಿಜಲಿಂಗಪ್ಪ ಬಡಾವಣೆ ಲಕ್ಷ್ಮಿ ಫ್ಲೋರ್ ಮಿಲ್, ಶಾಮನೂರು ರಸ್ತೆ, ಬಿಐಇಟಿ ಕಾಲೇಜ್ ರಸ್ತೆ, ಆಂಜನೇಯ ಬಡಾವಣೆ ರಸ್ತೆ, ವಿದ್ಯಾನಗರ ರಸ್ತೆ, ಐಟಿಐ ಕಾಲೇಜು, ವಿದ್ಯಾರ್ಥಿ ಭವನ ಸೇರಿದಂತೆ ನಗರದ ವಿವಿಧೆಡೆ ಸಂಚರಿಸಿ ನಂತರ ಪ್ರಾರಂಭಿಕ ಸ್ಥಳದಲ್ಲಿ ಸಮಾರೋಪಗೊಂಡಿತು.

ಈ ಸಂದರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಆವರಗೆರೆ ವಾಸು, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಅಖಿಲ ಭಾರತ ಕಿಸಾನ್ ಸಭಾದ ಹೆಚ್.ಜಿ. ಉಮೇಶ್, ಐರಣಿ ಚಂದ್ರು, ಕರ್ನಾಟಕ ಪ್ರಾಂತ ರೈತ ಸಂಘದ ಈ. ಶ್ರೀನಿವಾಸ್, ಮಂಜುನಾಥ್ ಕೈದಾಳ್, ಭಾರತಿ, ಸೌಮ್ಯ, ಎಐವೈಎಫ್ ತಿಪ್ಪೇಶ್, ಮಹಮ್ಮದ್ ರಫೀಕ್, ರಂಗನಾಥ್, ಪರಶುರಾಮಪ್ಪ ಸೇರಿದಂತೆ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

## ಇಂದು ಕರ್ನಾಟಕ ಬಂದ್

### ಹಲವಾರು ರೈತ ಸಂಘಟನೆಗಳಿಂದ ಕರೆ

ಬೆಂಗಳೂರು, ಸೆ. 27 – ಎಪಿಎಂಸಿ ಕಾಯ್ದೆ ಹಾಗೂ ಭೂ ಸುಧಾರಣಾ ಕಾಯ್ದೆಗಳ ವಿರುದ್ಧ ಕರ್ನಾಟಕ ಬಂದ್‌ಗೆ ಹಲವಾರು ರೈತ ಸಂಘಟನೆಗಳು ಕರೆ ನೀಡಿವೆ.

ಕನ್ನಡರ ಪರ ಸಂಘಟನೆಗಳು, ಪ್ರತಿಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳು ಬಂದ್‌ಗೆ ಬೆಂಬಲಿಸಿವೆ.

ಕಾರ್ಮಿಕ ಕಾಯ್ದೆಗಳಿಗೆ ತರಲಾಗಿರುವ ಸುಧಾರಣೆಗಳನ್ನು ವಿರೋಧಿಸಿರುವ ಹಲವು ಕಾರ್ಮಿಕ ಸಂಘಟನೆಗಳೂ ಸಹ ಬಂದ್‌ಗೆ ಬೆಂಬಲ ನೀಡಿವೆ. ಶನಿವಾರ ಪೂರ್ಣಗೊಂಡ ಸಂಕ್ಷಿಪ್ತ ಅಧಿವೇಶನದಲ್ಲಿ ಹಲವು ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರಲಾಗಿದೆ.

ಬಲವಂತದ ಬಂದ್‌ಗೆ ಮುಂದಾದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಸಿರುವ ರಾಜ್ಯ ಸರ್ಕಾರ, ಕಚೇರಿಗಳು, ಆಸ್ಪತ್ರೆ, ಅಂಗಡಿ - ಮುಂಗಟ್ಟುಗಳ ಕಾರ್ಯ ನಿರ್ವಹಣೆ, ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದೆ.

ಯಾವುದೇ ಅಹಿತಕರ ಘಟನೆ ತಪ್ಪಿಸಲು ಪೊಲೀಸರು ತೀವ್ರ ಬಂದೋಬಸ್ತ್ ಕ್ರಮ ತೆಗೆದುಕೊಂಡಿದ್ದಾರೆ.

ಕೆಲವು ಸರಕು ಸಾಗಣೆದಾರರು, ಟ್ಯಾಕ್ಸಿ ಹಾಗೂ ಆಟೋ ಚಾಲಕರೂ ಸಹ ಬಂದ್‌ಗೆ ಬೆಂಬಲ ನೀಡುವುದಾಗಿ ಹೇಳಿದ್ದಾರೆ. ಖಾಸಗಿ ಬಸ್ ಸೇವೆಗಳ ಮೇಲೆ ಪರಿಣಾಮವಾಗುವ ಸಾಧ್ಯತೆ ಇದೆ. ಆದರೆ, ಸರ್ಕಾರಿ ಬಸ್ ಮತ್ತು ಮೆಟ್ರೋ ರೈಲು ಸೇವೆ ಎಂದಿನಂತೆ ಕಾರ್ಯ ನಿರ್ವಹಿಸಲಿದೆ.

ಈ ನಡುವೆ ಹೇಳಿಕೆ ನೀಡಿರುವ (2ನೇ ಪುಟಕ್ಕೆ)

# ಕೃಷಿ ಮಸೂದೆಗಳಿಗೆ ರಾಷ್ಟ್ರಪತಿ ಅಂಕಿತ

ನವದೆಹಲಿ, ಸೆ. 27 – ಪ್ರತಿಪಕ್ಷಗಳ ತೀವ್ರ ಆಕ್ರೋಶಕ್ಕೆ ಗುರಿಯಾಗಿರುವ ಕೃಷಿ ವಲಯದ ಮೂರು ಮಸೂದೆಗಳಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಸಹಿ ಹಾಕಿದ್ದು, ಅವುಗಳು ಕಾಯ್ದೆಗಳಾಗಿ ಪರಿವರ್ತನೆಯಾಗಿವೆ.

ಕೃಷಿ ಉತ್ಪನ್ನಗಳ ವ್ಯಾಪಾರ ಹಾಗೂ ವಾಣಿಜ್ಯ ಉತ್ತೇಜನ ಮಸೂದೆ, ಕೃಷಿಕರ ಸಬಲೀಕರಣ ಹಾಗೂ ರಕ್ಷಣೆಗಾಗಿ ಬೆಲೆ ಖಾತ್ರಿ ನೀಡುವ ಮಸೂದೆ ಹಾಗೂ ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳಿಗೆ ಸಂಬಂಧಿಸಿದಂತೆ ಗೆಜೆಟ್ ಅಧಿಸೂಚನೆಯನ್ನೂ ಹೊರಡಿಸಲಾಗಿದೆ.

ಸಂಸತ್ತು ಕಳೆದ ವಾರ ಈ ಮಸೂದೆಗಳಿಗೆ ಒಪ್ಪಿಗೆ ನೀಡಿತ್ತು. ಇದರಿಂದಾಗಿ ಕೃಷಿ ವಲಯದಲ್ಲಿ ಉದಾರೀಕರಣವಾಗಲಿದೆ ಹಾಗೂ ರೈತರು ತಮ್ಮ ಇಳುವರಿಯನ್ನು ಎಲ್ಲಿ ಬೇಕಾದರೂ ಹೆಚ್ಚಿನ ಬೆಲೆಗೆ ಮಾರಬಹುದಾಗಿದೆ. ಕೃಷಿ ಮಸೂದೆಗಳ ವಿರುದ್ಧ ದೇಶಾದ್ಯಂತ ಹೋರಾಟ ನಡೆಯುತ್ತಿದ್ದು, ಪಂಜಾಬ್ ಹಾಗೂ ಹರಿಯಾಣಗಳಲ್ಲಿ ಹೋರಾಟ ತೀವ್ರವಾಗಿದೆ. ಕರ್ನಾಟಕದಲ್ಲಿ ಸೋಮವಾರದಂದು ಬಂದ್‌ಗೂ ಕರೆ ನೀಡಲಾಗಿದೆ. ಮಸೂದೆಗಳನ್ನು ವಿರೋಧಿಸಿ ಎನ್.ಡಿ.ಎ. ಅತ್ಯಂತ ಹಳೆಯ ಮಿತ್ರ ಪಕ್ಷವಾಗಿದ್ದ ಶಿರೋಮಣಿ ಅಕಾಲಿ ದಳ, ಮೈತ್ರಿಯನ್ನು ತೊರೆದಿದೆ.

ಆದರೆ, ಮಸೂದೆಗಳನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಇದರಿಂದ ರೈತರು ಸಂಕೋಲೆಗಳಿಂದ ಮುಕ್ತರಾಗಲಿದ್ದಾರೆ ಎಂದು ಹೇಳಿದೆ.

ಭಾನುವಾರದಂದು ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಪ್ರಧಾನಿ, ಹಣ್ಣು ಹಾಗೂ ತರಕಾರಿಗಳನ್ನು ಎಪಿಎಂಸಿ ಕಾಯ್ದೆ ವ್ಯಾಪ್ತಿಯಿಂದ ಹೊರ ತಂದ ನಂತರ ಕೃಷಿಕರಿಗೆ ಅನುಕೂಲವಾಗಿದೆ. ಅದೇ ರೀತಿಯ ಕ್ರಮಗಳನ್ನು ಇತರೆ ರೈತರಿಗೂ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

# ಭಿನ್ನಮತದಿಂದಾಗಿ ಮುರಿದ ಬಿಜೆಪಿ - ಅಕಾಲಿ ಮೈತ್ರಿ

ಚಂಡೀಘಡ, ಸೆ. 27 – ಕೃಷಿ ಮಸೂದೆಗಳಿಗೆ ಸಂಬಂಧಿಸಿದಂತೆ ಎನ್.ಡಿ.ಎ. ತೊರೆದಿರುವುದಾಗಿ ಶಿರೋಮಣಿ ಅಕಾಲಿ ದಳ ತಿಳಿಸಿದೆ. ಆದರೆ, ಬಿಜೆಪಿ ಹಾಗೂ ಅಕಾಲಿ ದಳಗಳ ನಡುವೆ ಕಳೆದ ಒಂದು ವರ್ಷದಿಂದಲೂ ಭಿನ್ನಮತ ಮುಂದುವರೆದೇ ಇತ್ತು.

ಎನ್.ಡಿ.ಎ. ಜೊತೆ ಮೈತ್ರಿ ಕಡಿದುಕೊಂಡಿರುವುದನ್ನು ಶಿರೋಮಣಿ ಅಕಾಲಿ ದಳದ ಮುಖ್ಯಸ್ಥ ಸುಖಬೀರ್ ಸಿಂಗ್ ಶನಿವಾರ ರಾತ್ರಿ ತಿಳಿಸಿದ್ದಾರೆ. ಪಂಜಾಬ್‌ನಲ್ಲಿ ಕೃಷಿ ಸಂಬಂಧದ ಮೂರು ಮಸೂದೆಗಳ ವಿರುದ್ಧ ಪ್ರತಿಭಟನೆಗಳು ತೀವ್ರವಾಗಿವೆ. ಮಸೂದೆಗಳನ್ನು ಇತ್ತೀಚೆಗೆ ಸಂಸತ್ತಿನಲ್ಲಿ ಜಾರಿಗೆ ತರಲಾಗಿದ್ದು, ಭಾನುವಾರವಷ್ಟೇ ರಾಷ್ಟ್ರಪತಿ ಅನುಮೋದನೆ ನೀಡಿದ್ದಾರೆ.

ಆದರೆ, ಮೈತ್ರಿ ಪಕ್ಷಗಳ ನಡುವೆ ಭಿನ್ನಮತ ಉಂಟಾಗಿರುವುದು ಇದೇ ಮೊದಲೇನೂ ಅಲ್ಲ. ಹಲವಾರು ಶಾಸನಗಳ ಸಂಬಂಧವೂ ಭಿನ್ನಮತ ಇದೆ.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ನಿರ್ದಿಷ್ಟ ಧರ್ಮಕ್ಕೆ ಸೀಮಿತಗೊಳಿಸಬಾರದು. ಎಲ್ಲ ಧರ್ಮಗಳ ವಲಸಿಗರಿಗೂ ಆಶ್ರಯ ಪಡೆಯಲು ಅವಕಾಶ ನೀಡಬೇಕು ಎಂದು ಶಿರೋಮಣಿ ಅಕಾಲಿ ದಳ ಕಳೆದ ವರ್ಷ ತಿಳಿಸಿತ್ತು. ಆದರೂ, ಕಗ್ಗಂಟಾಗಿದ್ದ ಮಸೂದೆಯ ಪರವಾಗಿ ಪಕ್ಷ ಮತ ಚಲಾಯಿಸಿತ್ತು.

**ವರ್ಷದಲ್ಲೇ ಎರಡು ಮಿತ್ರರನ್ನು ಕಳೆದುಕೊಂಡ 'ಕೇಸರಿ' ಪಕ್ಷ**

ಸಿಖ್ ಸಮುದಾಯದ ಹಿತ ರಕ್ಷಣೆಗಾಗಿ ಮಸೂದೆಗೆ ಬೆಂಬಲ ನೀಡಲಾಗುವುದು. ಆದರೆ, ಇದರಲ್ಲಿ ಮುಸ್ಲಿಮರನ್ನೂ ಸೇರಿಸಬೇಕು ಎಂದು ಅಕಾಲಿ ದಳ ಹೇಳುತ್ತಲೇ ಬಂದಿತ್ತು.

ಸಿಎಎ ಕುರಿತು ಬಿಜೆಪಿ ನಿಲುವು ಬದಲಿಸಬೇಕೆಂದು ಆಗ್ರಹಕ್ಕೆ ಪಟ್ಟು ಹಿಡಿದ್ದ ಅಕಾಲಿ ದಳ, ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿತ್ತು.

ಹರಿಯಾಣದ ಶಿರೋಮಣಿ ಅಕಾಲಿ ದಳದ ಏಕೈಕ ಶಾಸಕ ಬಲ್ಕೌರ್ ಸಿಂಗ್ ಅವರು ಅಕ್ಟೋಬರ್ 2019ರಲ್ಲಿ ಬಿಜೆಪಿಗೆ ಸೇರ್ಪಡೆಯಾಗಿದ್ದರು. (3ನೇ ಪುಟಕ್ಕೆ)

## ಕರ್ನಾಟಕ ಬಂದ್‌ಗೆ ಜಿಲ್ಲೆಯಲ್ಲಿ ಪೊಲೀಸ್ ಬಂದೋಬಸ್ತ್

ದಾವಣಗೆರೆ, ಸೆ. 27 – ರಾಜ್ಯದಲ್ಲಿ ರೈತ ಸಂಘಟನೆಗಳು ಕರೆದಿರುವ ಬಂದ್ ಹಿನ್ನೆಲೆಯಲ್ಲಿ ಸೋಮವಾರ ಜಿಲ್ಲಾದ್ಯಂತ ಪೊಲೀಸ್ ಬಂದೋಬಸ್ತ್‌ಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದ್ದಾರೆ.

3 ಕೆಎಸ್‌ಆರ್‌ಪಿ ಹಾಗೂ 6 ಡಿಎಆರ್ ತಂಡಗಳನ್ನು ದಾವಣಗೆರೆ ನಿಯೋಜಿಸಲಾಗಿದೆ. ಒಟ್ಟಾರೆ 600 ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳು ಸುರಕ್ಷತೆಗೆ ನಿಯೋಜಿತರಾಗಿದ್ದಾರೆ.

ಬಸ್ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಗಳಿಗೆ ಭದ್ರತೆ ಒದಗಿಸಲಾಗಿದೆ. ಗಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. ಬಲವಂತವಾಗಿ ಬಂದ್ ಮಾಡುವುದು ಹಾಗೂ ಆಸ್ತಿ ಪಾಸ್ತಿಗೆ ಹಾಳು ಮಾಡುವ ಕೃತ್ಯಗಳಿಗೆ ಯಾವುದೇ ಕಾರಣಕ್ಕೂ ಅವಕಾಶ ಇರುವುದಿಲ್ಲ. ಎಲ್ಲರೂ ಸಹಕರಿಸಬೇಕು ಎಂದು ಹನುಮಂತರಾಯ ಕೋರಿದ್ದಾರೆ.

## ಕ್ರಿಯಾಶೀಲ ವ್ಯಕ್ತಿತ್ವದ ದೊಗ್ಗಳ್ಳಿ ಗೌಡ್ರ ಪುಟ್ಟರಾಜು ನಿಧನ



ದಾವಣಗೆರೆ, ಸೆ.27- ಸಾಮಾಜಿಕ ಚಟುವಟಿಕೆಗಳ ಸಕ್ರೀಯ ಕಾರ್ಯಕರ್ತರಾದ ಕ್ರಿಯಾಶೀಲ ವ್ಯಕ್ತಿತ್ವದ ದೊಗ್ಗಳ್ಳಿ ಗೌಡ್ರು ಪುಟ್ಟರಾಜು ಅವರು ಇಂದು ಮಧ್ಯಾಹ್ನ 2.40ಕ್ಕೆ ನಿಧನರಾದರು. ಮೃತರಿಗೆ ಸುಮಾರು 48 ವರ್ಷ ವಯಸ್ಸಾಗಿತ್ತು.

ಜೆ.ಹೆಚ್.ಪಟೇಲ್ ಕಾಲೇಜಿನ ಸಂಸ್ಥಾಪಕರಾಗಿದ್ದ ಅವರು, ಅದರ ಗೌರವ ಅಧ್ಯಕ್ಷರಾಗಿ ಸೇವೆ (3ನೇ ಪುಟಕ್ಕೆ)

## 'ಕರ್ನಾಟಕ ರಾಜ್ಯೋತ್ಸವ' ವಿಜೃಂಭಣೆ ಆಚರಣೆ

ದಾವಣಗೆರೆ, ಸೆ.27- ಈ ವರ್ಷದ ನವೆಂಬರ್‌ನಲ್ಲಿ ನಗರ ಪಾಲಿಕೆಯಿಂದ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದ್ದು, ಇದರ ಯಶಸ್ಸಿಗೆ ಎಲ್ಲಾ ಕನ್ನಡಪರ ಸಂಘಟನೆಗಳ ಸಹಕಾರ ಅಗತ್ಯ ಎಂದು ಮಹಾನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ್‌ಕುಮಾರ್ ತಿಳಿಸಿದರು.



**ಕನ್ನಡ ಪರ ಸಂಘಟನೆಗಳ ಒಕ್ಕೂಟದ ಸಭೆಯಲ್ಲಿ ಮೇಯರ್ ಬಿ.ಜಿ. ಅಜಯ್‌ಕುಮಾರ್**

ನಾಳೆ ಸೋಮವಾರ ಕರೆದಿರುವ ಕರ್ನಾಟಕ ಬಂದ್ ಸಂಬಂಧ ಕನ್ನಡ ಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ರೋಟರಿ ಬಾಲಭವನದಲ್ಲಿ ಇಂದು ನಡೆದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ವರ್ಷ ಪಾಲಿಕೆಯಲ್ಲಿ ಅಧಿಕಾರಿಗಳಿಲ್ಲದ ಪರಿಣಾಮ ರಾಜ್ಯೋತ್ಸವವನ್ನು ಆಚರಿಸಲಾಗಲಿಲ್ಲವೆಂದರು.

**ಗ್ರೀನ್ ಸಿಟಿಗೆ ಸಿದ್ಧತೆ;** ನಗರವನ್ನು ಸಂಪೂರ್ಣವಾಗಿ ಹಸಿರುಮಯವಾಗಿಸಲು ಗ್ರೀನ್ ಸಿಟಿ ಯೋಜನೆಗೆ ಸಿದ್ಧತೆ ನಡೆಸಲಾಗಿದ್ದು, ಒಂದು ಲಕ್ಷ ಸಸಿ ನೆಡುವ ಉದ್ದೇಶವಿದೆ. ಹಾಗಾಗಿ ಎಲ್ಲಾ ಸಿದ್ಧತೆ ಮಾಡಲಾಗಿದ್ದು, ಶೀಘ್ರವೇ ಜಿಲ್ಲಾ ಉಸ್ತುವಾರಿ ಸಚಿವರು ಇದಕ್ಕೆ ಚಾಲನೆ ನೀಡಲಿದ್ದಾರೆ. ಈ ಹಿಂದೆ ಪಂಪಾಪತಿಯವರು ನೆಟ್ಟಿದ್ದ ಸಾವಿರಾರು ಗಿಡಗಳ ನೆರಳಿನಲ್ಲಿ ನಮ್ಮ ಬದುಕು ಇದೆ. ಪರಿಶುದ್ಧ ಗಾಳಿ ಸಿಗುವಂತಾಗಿದೆ. ಇದೀಗ ನಾವು ನೆಡುವ ಸಸಿಗಳು ನಮ್ಮ ಮಕ್ಕಳು, ಮೊಮ್ಮಕ್ಕಳ ಕಾಲಕ್ಕೆ ನೆರಳು, ಶುದ್ಧ ಗಾಳಿ ನೀಡಲಿವೆ. ಈ ನಿಟ್ಟಿನಲ್ಲಿ 'ಗ್ರೀನ್ ಸಿಟಿ' ಯೋಜನೆ ಪೂರಕವಾಗಲಿದೆ ಎಂದು ಹೇಳಿದರು.

**ಜನರ ಬಳಿ ಬಂದು ಅಳಲು ಆಲಿಸುವೆ:** ಪಾಲಿಕೆ ವ್ಯಾಪ್ತಿಯ ಜನರ ಸಮಸ್ಯೆಗಳನ್ನು ಆಲಿಸುವ ಸಲುವಾಗಿ ಶೀಘ್ರವೇ 'ಮನೆ ಬಾಗಿಲಿಗೆ ನಗರ ಪಾಲಿಕೆ' ಎಂಬ ಯೋಜನೆ (2ನೇ ಪುಟಕ್ಕೆ)

## ರಾಮನ ನೆಲೆಯಲ್ಲಿ 'ರಿಯಲ್ ಎಸ್ಟೇಟ್'ಗೆ ಏರಿದ ಬೇಡಿಕೆ

ಅಯೋಧ್ಯೆ,ಸೆ. 27 - ರಾಮ ಮಂದಿರ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದ ನಂತರ ಅಯೋಧ್ಯೆಯಲ್ಲಿ ಜಮೀನಿನ ಬೆಲೆ ಗಗನಕ್ಕೇರಿದೆ.


ರಾಮಜನ್ಮಭೂಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಕಳೆದ ವರ್ಷ ತೀರ್ಪು ನೀಡಿದ ನಂತರದಿಂದಲೇ ಜಮೀನಿನ ಬೆಲೆಗಳು ಏರುವುದು ಆರಂಭವಾಗಿತ್ತು. ಭೂಮಿ ಪೂಜೆ ನಂತರವಂತೂ ಏರಿಕೆ ಇನ್ನಷ್ಟು ವೇಗ ಪಡೆದುಕೊಂಡಿದೆ.

**ಶಿಲಾನ್ಯಾಸದ ನಂತರ ಜಮೀನು ಬೆಲೆ ಎರಡು ಪಟ್ಟು ಹೆಚ್ಚಳ**

ಅಯೋಧ್ಯೆಯನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣ ಮಾಡಲು ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಹೊಂದಿದ್ದು, ಅದಕ್ಕಾಗಿ ಜಮೀನು ವಶಕ್ಕೆ ಮುಂದಾಗಿದೆ. ಹೀಗಾಗಿ ಖರೀದಿಗೆ ಲಭ್ಯವಿರುವ ಜಮೀನು ಕಡಿಮೆ ಇದೆ ಎಂದು ರಿಯಲ್ ಎಸ್ಟೇಟ್ ವಲಯದವರು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ಕಳೆದ (2ನೇ ಪುಟಕ್ಕೆ)

## ಬಿಜೆಪಿ ಸ್ಥಾಪಕ ಸದಸ್ಯ ಜಸ್ವಂತ್ ಸಿಂಗ್ ನಿಧನ



ನವದೆಹಲಿ, ಸೆ. 27 - ಬಿಜೆಪಿ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ಹಾಗೂ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನಿಕಟವರ್ತಿಯಾಗಿದ್ದ ಮಾಜಿ ಕೇಂದ್ರ ಸಚಿವ ಜಸ್ವಂತ್ ಸಿಂಗ್ ನಿಧನರಾಗಿದ್ದಾರೆ. ಅವರಿಗೆ 82 ವರ್ಷ ವಯಸ್ಸಾಗಿತ್ತು.

ರಾಷ್ಟ್ರಪತಿ ರಾಮನಾಥ ಕೋವಿಂದ್, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವರು ಹಾಗೂ ಉನ್ನತ ನಾಯಕರು ಅಗಲಿದ ಸಿಂಗ್ ಅವರಿಗೆ ಸಂತಾಪ ಸೂಚಿಸಿದ್ದಾರೆ.

ಮಾಜಿ ಸೈನಿಕ ಅಧಿಕಾರಿಯಾಗಿದ್ದ ಸಿಂಗ್, ಆಗಸ್ಟ್ 2014ರಲ್ಲಿ ತಮ್ಮ ಮನೆಯಲ್ಲಿ ಬಿದ್ದ ನಂತರ ಸೈನ್ಯದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಸುದೀರ್ಘ ಕಾಲ ಕೋಮಾದಲ್ಲಿದ್ದ ಅವರು, ನಿನ್ನೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಈ ವರ್ಷ ಜೂನ್‌ನಲ್ಲಿ ಅವರನ್ನು (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ ಕೊರೊನಾ 'ಸಂಖ್ಯೆ' ಮಾತ್ರ ಇಳಿಕೆ, ಸೋಂಕಲ್ಲ!

ದಾವಣಗೆರೆ, ಸೆ. 27 – ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಕೊರೊನಾ ಸೋಂಕಿನ 'ಸಂಖ್ಯೆ' ಗಣನೀಯವಾಗಿ ಇಳಿಕೆಯಾಗುತ್ತಾ ಬಂದು, ಭಾನುವಾರದಂದು ಕೇವಲ 74ಕ್ಕೆ ತಲುಪಿದೆ.

ಹಾಗೆಂದು ಜಿಲ್ಲೆಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ತೀವ್ರವಾಗಿ ಕಡಿಮೆಯಾಗಿಲ್ಲ. ಇದು ಅಂಕಿ-ಅಂಶಗಳಲ್ಲಿ ಮಾತ್ರ ಕಡಿಮೆಯಾಗಿದೆ. ಆರೋಗ್ಯ ಅಭಿಯಾನ ಕಾರ್ಯಕ್ರಮದ ಸಿಬ್ಬಂದಿ ಮುಷ್ಕರ ಹಾಗೂ ತಾಂತ್ರಿಕ ದೋಷದಿಂದಾಗಿ ಜಿಲ್ಲಾಡಳಿತ ಪ್ರಕಟಿಸುತ್ತಿರುವ ಮಾಹಿತಿಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಕಡಿಮೆಯಾಗಿದೆ. ಈ ಬಗ್ಗೆ ಸ್ಪಷ್ಟನೆ (2ನೇ ಪುಟಕ್ಕೆ)

# ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಜಿಲ್ಲಾಡಳಿತ ಸನ್ನದ್ಧ : ಡಿಸಿ



ಹರಿಹರ, ಸೆ.27 - ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, ಗೆಡ್ಡೆರಾಮೇಶ್ವರಕ್ಕೆ 15 ಕೋಟಿ, ತೀರ್ಥರಾಮೇಶ್ವರ ದೇವಸ್ಥಾನಕ್ಕೆ 13 ಕೋಟಿ, ಕೊಂಡಜ್ಜಿ ಕೆರೆ ಅಭಿವೃದ್ಧಿಗೆ 8 ಕೋಟಿ, ಶಾಂತಿಸಾಗರ ಸಂಕೀರ್ಣ ಮಾಡುವ ನಿಟ್ಟಿನಲ್ಲಿ 34.60 ಕೋಟಿ, ರೂ.ಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು, ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಜಿಲ್ಲಾಡಳಿತ ಎಲ್ಲಾ ರೀತಿಯಲ್ಲಿ ಸನ್ನದ್ಧವಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾ ಪ್ರವಾಸೋದ್ಯಮ ಇಲಾಖೆ ವತಿಯಿಂದ ನಗರದ ಬಿರ್ಲಾ ಕಲ್ಯಾಣ ಮಂಟಪದಲ್ಲಿ ಇಂದು ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದ ಹೃದಯ ಭಾಗದಲ್ಲಿರುವ ದಾವಣಗೆರೆ ಜಿಲ್ಲೆಯಲ್ಲಿ ಅನೇಕ ಪ್ರವಾಸಿ ತಾಣಗಳು ಇದ್ದು, ಅವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಈಗಾಗಲೇ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ ಮತ್ತು ಸದ್ಯದಲ್ಲಿ ಕೇಂದ್ರ ಸಚಿವರು ಸಹ ಜಿಲ್ಲೆಗೆ ಭೇಟಿ ನೀಡುವರು. ಅವರು ಬಂದಾಗ ಜಿಲ್ಲೆಯ ಅನೇಕ ಯಾತ್ರಾ ಸ್ಥಳಗಳ ಬಗ್ಗೆ ಅವರ ಗಮನಕ್ಕೆ ತರುವುದರ ಜೊತೆಗೆ ನಮಗೆ ಬೇಕಾದ ಆತ್ಮೀಯ ವ್ಯಕ್ತಿಗಳು ಸಹ ಕೇಂದ್ರ ಪ್ರವಾಸೋದ್ಯಮ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಅವರ ಗಮನಕ್ಕೆ ತಂದು ಇಲ್ಲಿನ ಯಾತ್ರಾ ಸ್ಥಳಗಳ ಅಭಿವೃದ್ಧಿಗೆ ಹೆಚ್ಚು ಆದ್ಯತೆ ಕೊಡುವ ನಿಟ್ಟಿನಲ್ಲಿ ದಾಪುಗಾಲು ಹಾಕಲಾಗುತ್ತದೆ ಎಂದು ಹೇಳಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕಿನ ಜನ ಪ್ರತಿನಿಧಿಗಳು ಸಹ ನಮಗೆ ಉತ್ತಮ ರೀತಿಯಲ್ಲಿ ಕೈ ಜೋಡಿಸುತ್ತಿದ್ದಾರೆ. ಅದರ (2ನೇ ಪುಟಕ್ಕೆ)

> ಜಿಲ್ಲೆಯ 5 ಪ್ರವಾಸಿ ತಾಣಗಳನ್ನು ಪ್ರವಾಸೋದ್ಯಮ ಇಲಾಖೆ ಗುರುತಿಸಿದ್ದು, ಅವುಗಳಲ್ಲಿ ಹರಿಹರೇಶ್ವರ ದೇವಾಲಯ, ಕೊಂಡಜ್ಜಿ ಕೆರೆ, ತೀರ್ಥರಾಮೇಶ್ವರ, ಶಾಂತಿಸಾಗರ, ಸಂತೆಬೆನ್ನೂರಿನ ಪುಷ್ಕರಣಿ ಒಳಗೊಂಡಿದೆ. ಸುಮಾರು 20 ಪ್ರಮುಖ ಪ್ರವಾಸಿ ತಾಣಗಳು ಎಂದು ಗುರುತಿಸಲಾಗಿದೆ. ಅದರಲ್ಲಿ ಅಮ್ಮನಗುಡ್ಡ, ಗಾಜಿನಮನೆ, ದುಗ್ಗಮ್ಮ ದೇವಾಲಯ, ಮದಕರಿ ನಾಯಕನ ಸಮಾಧಿ, ಷಹಾಜಿ ಸಮಾಧಿ, ಚನ್ನಗಿರಿ ಕೋಟೆ, ಗಡ್ಡೆರಾಮೇಶ್ವರ, ಉಕ್ಕಡಗಾತ್ರಿ ದೇವಾಲಯ, ನಂದಿಗುಡಿ ದೇವಸ್ಥಾನ ಸೇರಿದಂತೆ ಅನೇಕ ತಾಣಗಳನ್ನು ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಸೇರಿಸುವಂತೆ ಕೇಂದ್ರ ಕಚೇರಿಗೆ ಮನವಿ ಮಾಡಲಾಗಿದೆ.
>
> \- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ

> ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ಬರುವ ಯಾತ್ರಾ ಸ್ಥಳಗಳಿಂದ ಶೇ. 9 ರಷ್ಟು ಆದಾಯ ಬರುತ್ತದೆ ಮತ್ತು ಶೇ. 8 ರಷ್ಟು ಸಾರ್ವಜನಿಕರಿಗೆ ಉದ್ಯೋಗ ದೊರೆಯುತ್ತದೆ. ಇನ್ನಷ್ಟು ವಿಸ್ತರಿಸಿ, ಪ್ರತಿಭೆಗಳನ್ನು ಬಳಸಿಕೊಂಡು ಶೈಕ್ಷಣಿಕವಾಗಿ ಅಭಿವೃದ್ಧಿ ಮಾಡುವುದರಿಂದ ಆದಾಯ ಹೆಚ್ಚು ಆಗುತ್ತದೆ.
>
> \- ಕೆ.ಬಿ.ರಾಮಚಂದ್ರಪ್ಪ, ತಹಶೀಲ್ದಾರ್, ಹರಿಹರ.


**ಶ್ರೀಮತಿ ಸುವರ್ಣಮ್ಮ ಮಹೇಶ್ವರಪ್ಪ ನಿಧನ**



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ, ಮಾಜಿ ರಾಜ್ಯಸಭಾ ಸದಸ್ಯರಾದ ದಿ.ಕೆ.ಜಿ.ಮಹೇಶ್ವರಪ್ಪ ಇವರ ಧರ್ಮಪತ್ನಿ,

**ಶ್ರೀಮತಿ ಸುವರ್ಣಮ್ಮ ಮಹೇಶ್ವರಪ್ಪನವರು**

ದಿನಾಂಕ 26.09.2020 ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 88 ವರ್ಷ ವಯಸ್ಸಾಗಿತ್ತು. ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಅವರ ಸ್ವಗ್ರಾಮ ಕುರ್ಕಿಯಲ್ಲಿ ದಿನಾಂಕ 27.09.2020ರಂದು ಭಾನುವಾರ ಮಧ್ಯಾಹ್ನ ನಡೆಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ

**ಕುರ್ಕಿ ಗೌಡ್ರು ವಂಶಸ್ಥರು ಹಾಗೂ ಗ್ರಾಮಸ್ಥರು**

**ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ ಸಣ್ಣ, ಸಣ್ಣ, ಸೈಟ್‌ಗಳು ಮಾರಾಟಕ್ಕಿವೆ**
20x30 ದಕ್ಷಿಣ, 20x30 ಉತ್ತರ, 20x30 ಪಶ್ಚಿಮ, 20x30 ಪೂರ್ವ, 30x30, ಕಾರ್ನರ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಸೈಟ್‌ಗಳು ಮಾರಾಟಕ್ಕೆ**
ನವೋದಯ ಸ್ಕೂಲ್ ಹತ್ತಿರ 30x50 ದಕ್ಷಿಣ, ನಿಜಲಿಂಗಪ್ಪ ಬಡಾವಣೆಯಲ್ಲಿ 40x60 ದಕ್ಷಿಣ, 35x60 North west corner.
ಐನಳ್ಳಿ ಚನ್ನಬಸಪ್ಪ , ಏಜೆಂಟ್
99166 12110
93410 14130

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಎಸ್.ಎಸ್. ಲೇಔಟ್, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಬಡಾವಣೆ ಹಾಗೂ ಬಾಡಾ ಕ್ರಾಸ್ ಹತ್ತಿರ, ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ, ಭೂಮಿಕ ಲೇಔಟ್, ಪುಷ್ಪ ಮಹಾಲಿಂಗಪ್ಪ ಶಾಲೆ ಹತ್ತಿರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ವೇರ್, ಏಜೆಂಟ್
97315 12365

**ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯ ಸಿಬ್ಬಂದಿಗೆ ಅಡುಗೆ ಮಾಡಲು ಪ್ರತಿಷ್ಠಿತ ಆಸ್ಪತ್ರೆಗೆ ಕೆಲಸ ಮಾಡಲು ಹೆಂಗಸರು (ಇಬ್ಬರು) ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
08192 252228, 86186 42929

**ಬೇಕಾಗಿದ್ದಾರೆ**
ಗಿಟಾರ್ ಹೇಳಿಕೊಡುವ ಶಿಕ್ಷಕರು ಬೇಕಾಗಿದ್ದಾರೆ.
ಸಂಪರ್ಕಿಸಿ :
94480 55555

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಗಿರ್ ಹಸುವಿನ ಹಾಲು ದೊರೆಯುತ್ತದೆ**
ಟಿಂಕು ಅಭಿ ಶಾಪೆ
511, 5ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
ಫೋ. : 90351 01792
70194 81919

**ಬೇಕಾಗಿದ್ದಾರೆ**
ಖಜಾನೆ 2 ಕಾರ್ಯನಿರ್ವಹಣೆಯಲ್ಲಿ ಅನುಭವವಿರುವ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಹೆಚ್ಚಿನ ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕಂಪ್ಯೂಟರ್ ಆಪರೇಟರ್ ಪದವೀಧರರು ಬೇಕಾಗಿದ್ದಾರೆ.
ಉತ್ತಮ ವೇತನ, ಇತರೆ ಸೌಲಭ್ಯವಿದೆ.
73539 50027, 94499 18575

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಅರಸ್ ಬಡಾವಣೆ 'ಎ' ಬ್ಲಾಕ್ ಸೀಮೆಎಣ್ಣೆ ಬಂಕ್ ಎದುರು, ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್‌ರೂಂ, ಸೆಕೆಂಡ್ ಫ್ಲೋರ್‌ನಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ:
73495 98347, 94481 25056

**ಶ್ರೀ ಕೃಷ್ಣ ಗ್ರೂಪ್ಸ್ ಹೋಂ ನರ್ಸಿಂಗ್ ಸರ್ವೀಸ್**
ನಮ್ಮಲ್ಲಿ ಆಸ್ಪತ್ರೆಗಳಲ್ಲಿ ಅನುಭವವಿರುವ ಸಿಬ್ಬಂದಿಗಳಿಂದ 24 ಗಂಟೆ ಹೋಂ ನರ್ಸಿಂಗ್ ಸೌಲಭ್ಯ ಇರುತ್ತದೆ.
ಸಂಪರ್ಕಿಸಿ:
ಜೆ.ಹೆಚ್.ರಂಗನಾಥ್
3ನೇ ಮೇನ್ 3ನೇ ಕ್ರಾಸ್ ಮಾಮಾಸ್ ಜಾಯಿಂಟ್ ರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
72595 99468, 94819 10822

**ಸೈಟ್ ಮಾರಾಟಕ್ಕೆ ಇದೆ**
44x60 ಅಳತೆಯ 9ನೇ ಮೇನ್, ಎಂ.ಸಿ.ಸಿ 'ಎ' ಬ್ಲಾಕ್ ಸಾಯಿಬಾಬ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿರುವ ಖಾಲಿ ಸೈಟ್.
98447 78891
86600 44143

**ಆಫೀಸ್ ಬಾಡಿಗೆಗೆ ಇದೆ**
25x30 ಅಳತೆಯ ಎಂ.ಸಿ.ಸಿ. ಬಿ ಬ್ಲಾಕ್, 3ನೇ ಕ್ರಾಸ್, ಮಾಮಾಸ್ ಜಾಯಿಂಟ್ ರೋಡ್‌ನಲ್ಲಿ 1ನೇ ಮಹಡಿಯಲ್ಲಿ ಆಫೀಸ್‌ಗಾಗಿ ಬಾಡಿಗೆಗೆ ಇದೆ.
ಫೋ. : 821777 2482
94489 21346

**ಬೇಕಾಗಿದ್ದಾರೆ**
ಪ್ರತಿಷ್ಠಿತ ಆಸ್ಪತ್ರೆಗೆ ಅನುಭವವುಳ್ಳ ಲ್ಯಾಬ್ ಟೆಕ್ನೀಶಿಯನ್ ಬೇಕಾಗಿದ್ದಾರೆ.
99725 23910

ನಮ್ಮಲ್ಲಿ ವಯೋ ವೃದ್ಧರಿಗೆ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು
ಸಂಪರ್ಕಿಸಿ: ಜ್ಯೋತಿ ನಿರಂತರ ಸೇವಾ ಚಾರಿಟಬಲ್ ಟ್ರಸ್ಟ್ (ರಿ)
76250 15036
8971192936

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**FOR LEASE**
Fully Furnished 2 BHK flat in S.S.Layout, Ring road circle, Davnagere.
Contact
91645-46459


# 'ಕರ್ನಾಟಕ ರಾಜ್ಯೋತ್ಸವ' ವಿಜೃಂಭಣೆ ಆಚರಣೆ : ಮೇಯರ್

**(1ನೇ ಪುಟದಿಂದ)** ಜಾರಿಗೊಳ್ಳಲಿದೆ.

ಎಲ್ಲಾ 45 ವಾರ್ಡ್‌ಗಳಲ್ಲೂ ಒಂದು ದಿನ ಪಾಲಿಕೆ ಅಧಿಕಾರಿ ವರ್ಗ ಮತ್ತು ವಾರ್ಡಿನ ಸದಸ್ಯರ ಜೊತೆ ಭೇಟಿ ನೀಡಿ ಅಲ್ಲಿನ ಜನರ ಮನೆ ಬಳಿ ತೆರಳಿ ಸಮಸ್ಯೆ ಆಲಿಸುವ ಕೆಲಸ ಮಾಡುವುದಾಗಿ ಮೇಯರ್ ತಿಳಿಸಿದರು.

'ಜಲಸಿರಿ' ಯೋಜನೆಯಡಿ ನಗರಕ್ಕೆ ನೀರೊದಗಿಸುವ 3 ದೊಡ್ಡ ಮೋಟರ್‌ಗಳು ಸುಟ್ಟು ಹೋಗಿವೆ. ಇವುಗಳ ಬದಲಿಗೆ 3 ಹೊಸ ಮೋಟರ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದ ಅವರು, ಹೊಸದಾಗಿ 2,500 ಬೀದಿ ದೀಪ ಅಳವಡಿಸುವ ಯೋಜನೆ ಇದೆ. ಈ ಎಲ್ಲ ಕಾರ್ಯಗಳಿಗೆ ದೊಡ್ಡ ಮೊತ್ತದ ಅನುದಾನ ತರಲು ಬೆಂಗಳೂರಿಗೆ ಹೋಗಿ ಎರಡು ದಿನ ಇದ್ದು, ಮಂತ್ರಿಗಳ ಭೇಟಿ ಮಾಡಿರುವೆ. ಆ ಮೂಲಕ ಜನರ ಋಣ ತೀರಿಸುವ ಕೆಲಸ ಮಾಡುವೆನು ಎಂದು ಅಜಯ್‌ಕುಮಾರ್ ಹೇಳಿದರು.

**ತೋರಿಸಿದ ಸ್ಥಳದಲ್ಲಿ ಭುವನೇಶ್ವರಿ ದೇವಸ್ಥಾನ;** ನಗರದಲ್ಲಿ ಭುವನೇಶ್ವರಿ ದೇವಸ್ಥಾನ ನಿರ್ಮಾಣಕ್ಕೆ ಸಂಘಟನೆಗಳು ಸ್ಥಳ ತೋರಿಸಿದರೆ ಅಲ್ಲಿ ನಿರ್ಮಾಣ ಮಾಡಲಾಗುವುದು ಅಥವಾ ಪಾಲಿಕೆಯಿಂದ ಸ್ಥಳ ನೀಡುವ ಜೊತೆಗೆ ಸಂಘಟನೆಗಳು ವಹಿಸುವ ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ದನಿದ್ದೇನೆ. ಇಷ್ಟೇ ಅಲ್ಲದೇ ಜಯದೇವ ವೃತ್ತದಲ್ಲಿ ಕುವೆಂಪು, ಡಾ. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್, ಶಂಕರ್‌ನಾಗ್ ಅವರ ಪುತ್ಥಳಿ ನಿರ್ಮಾಣಕ್ಕೂ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಕನ್ನಡಪರ ಸಂಘಟನೆಗಳು ಒಂದೇ ಕಡೆ ಸೇರಿರುವುದೇ ಉತ್ತಮ ಬೆಳವಣಿಗೆ. ಈ ಮೂಲಕ ನಾಡು-ನುಡಿ ವಿಚಾರದಲ್ಲಿ ಎಲ್ಲಾ ಸಂಘಟನೆಗಳು ಒಟ್ಟಾಗಿ ಹೋರಾಟಕ್ಕಿಳಿದಿರುವುದು ಶ್ಲಾಘನೀಯ. ದಾವಣಗೆರೆ, ಅನೇಕ ರೀತಿಯ ಜನಪರ, ನಾಡು-ನುಡಿ ಪರವಾದ ಹೋರಾಟಗಳಿಗೆ ಕಿಚ್ಚು ಹಚ್ಚಿದ ನೆಲ. ಇಲ್ಲಿಂದ ಆರಂಭಗೊಂಡ ಎಲ್ಲಾ ಹೋರಾಟಗಳು ಯಶಸ್ಸು ಕಂಡಿವೆ. ಆದರೆ ಈ ಹೋರಾಟದ ಕಿಚ್ಚು ನಿರಂತರವಾಗಿರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಕನ್ನಡ ಪರ ಸಂಘಟನೆಗಳ ಮುಖಂಡರುಗಳಾದ ಕೆ.ಜಿ. ಶಿವಕುಮಾರ್, ಎಂ.ಎಸ್. ರಾಮೇಗೌಡ, ರಂಗ ಕಲಾವಿದ ಎ. ಭದ್ರಪ್ಪ, ರೈತ ಮುಖಂಡ ಹೊನ್ನೂರು ಮುನಿಯಪ್ಪ, ಸೋಮಶೇಖರ್, ನಾಗರಾಜ್ ಗೌಡ, ಸಂತೋಷ್, ದಾಕ್ಷಾಯಣಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

# ಹರಪನಹಳ್ಳಿಯ ವೀರಶೈವ ಸಮಾಜದ ಮುಖಂಡ ಮಲ್ಲಿಕಾರ್ಜುನಯ್ಯ ನಿಧನ



ಹರಪನಹಳ್ಳಿ, ಸೆ.27- ತಾಲ್ಲೂಕಿನ ವೀರಶೈವ ಸಮಾಜದ ಹಿರಿಯ ಮುಖಂಡ, ಬಿ.ಇ.ಓ ಕಚೇರಿಯ ನಿವೃತ್ತ ಪತ್ರಾಂಕಿತ ವ್ಯವಸ್ಥಾಪಕ ಎ.ಎಂ.ಮಲ್ಲಿಕಾರ್ಜುನಯ್ಯ ಅವರು ಇಂದು ನಿಧನರಾದರು.

ಮೃತರು ಪತ್ನಿ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಕಾರಾಧ್ಯ ಸೇರಿದಂತೆ ಇಬ್ಬರು ಪುತ್ರಿಯರು, ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಇಂದು ಸಂಜೆ ಜರುಗಿತು.

ಮಲ್ಲಿಸ್ವಾಮಿಯವರು ಎಂದೇ ಜನಜನಿತರಾಗಿದ್ದ ಅವರು, ಸ್ಥಳೀಯ ಎಸ್‌ಯುಜೆಎಂ ಕಾಲೇಜಿನ ಅಧ್ಯಕ್ಷರಾಗಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷರಾಗಿ, ಪುರಸಭಾ ಮಾಜಿ ನಾಮನಿರ್ದೇಶಕ ಸದಸ್ಯರಾಗಿ, ಕೊಟ್ಟೂರಿನ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆಯ ಗೌ.ಅಧ್ಯಕ್ಷರಾಗಿ, ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿರ್ದೇಶಕರಾಗಿ, ಇಲ್ಲಿನ ತೆಗ್ಗಿನಮಠದ ಲಿಂ. ಚಂದ್ರಮೌಳೀಶ್ವರ ಶ್ರೀಗಳ ವಜ್ರ ಮಹೋತ್ಸವ ಸಮಿತಿ ಅಧ್ಯಕ್ಷರಾಗಿ, ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲಾ ಲಿಪಿಕ ನೌಕರರ ಸಂಘದ ಉಪಾಧ್ಯಕ್ಷರಾಗಿ ಹೀಗೆ ವಿವಿಧ ಸಮಾಜಮುಖಿ ಕಾರ್ಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರಿಗೆ ತೆಗ್ಗಿನಮಠ ಶ್ರೀ ಪ್ರಶಸ್ತಿ, ಜಿಲ್ಲಾ ಲಿಪಿಕ ನೌಕರರ ಪ್ರಶಸ್ತಿ ಲಭಿಸಿವೆ.

**ಗಣ್ಯರ ಸಂತಾಪ :** ಮಲ್ಲಿಕಾರ್ಜುನಯ್ಯ ಅವರ ನಿಧನಕ್ಕೆ ಉಜ್ಜಯಿನಿ ಶ್ರೀ ಜಗದ್ಗುರು ಸಿದ್ದಲಿಂಗ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ, ತೆಗ್ಗಿನಮಠದ ವರಸದ್ಯೋಜಾತ ಶ್ರೀಗಳು, ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಬಿ.ರಾಮಪ್ರಸಾದ್ ಗಾಂಧಿ, ಶ್ರೀ ವೆಂಕಟರಮಣ ಪರ್ಮನೆಂಟ್ ಭಂಡಾರ ನಿಧಿ ಲಿಮಿಟೆಡ್ ಅಧ್ಯಕ್ಷ ಟಿ.ವ್ಯಾಸರಾಜ್, ನಿರ್ದೇಶಕರಾದ ಗುಡಿಬಿಂದುಮಾಧವ, ಟಿ.ಎಂ. ಚಂದೂಧರ, ಯು.ದತ್ತಾತ್ರೇಯ ಭಟ್, ಎಲ್. ಬಸವರಾಜ್, ಬಿ.ಮಾಧವರಾವ್, ಕಛೇರಿಯ ಹಿರಿಯ ಲೆಕ್ಕ ಪರಿಶೋಧಕ ಎಸ್. ಶ್ಯಾಮ್‌ಸುಂದರ್ ಭಟ್, ಸಿಬ್ಬಂದಿಗಳಾದ ಎ.ಶ್ರೀನಿವಾಸ್, ವೈದ್ಯವಾದಿರಾಜ್, ಲಕ್ಷ್ಮಿನಾರಾಯಣ್, ಸುರೇಂದ್ರ, ಮಂಚಾಲಿ, ಮೈದೂರು ಪ್ರಕಾಶ ಸೇರಿದಂತೆ ಅಪಾರ ಗಣ್ಯರು ಸಂತಾಪ ಸೂಚಿಸಿದ್ದಾರೆ.

# ಕೊರೊನಾ 'ಸಂಖ್ಯೆ' ಮಾತ್ರ ಇಳಿಕೆ, ಸೋಂಕಲ್ಲ !

**(1ನೇ ಪುಟದಿಂದ)** ನೀಡಿರುವ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಜಿ.ಡಿ. ರಾಘವನ್, ಸೋಂಕು ಪ್ರಕರಣಗಳು ಆಗಸ್ಟ್ ಕೊನೆ ವಾರ ಹಾಗೂ ಸೆಪ್ಟೆಂಬರ್ ಮೊದಲ ಪಾಕ್ಷಿಕಕ್ಕೆ ಹೋಲಿಸಿದರೆ ಇಳಿಮುಖವಾಗಿರುವುದು ನಿಜ. ಆದರೆ, ಜೊತೆಯಲ್ಲಿ ಆರೋಗ್ಯ ಅಭಿಯಾನ ಕಾರ್ಯಕ್ರಮದ ಸಿಬ್ಬಂದಿ ಮುಷ್ಕರ ಹಾಗೂ ತಾಂತ್ರಿಕ ದೋಷದಿಂದ ವಾಸ್ತವ ಸಂಖ್ಯೆ ದೊರೆತಿಲ್ಲ ಎಂದು ತಿಳಿಸಿದ್ದಾರೆ.

ನಾಳೆ ಸೋಮವಾರದಿಂದ ವಿವರಗಳನ್ನು ಅಪ್ಡೇಟ್ ಮಾಡಲಾಗುವುದು ಎಂದೂ ಅವರು ಹೇಳಿದ್ದಾರೆ.

ಜಿಲ್ಲೆಯಲ್ಲಷ್ಟೇ ಅಲ್ಲ ರಾಜ್ಯದ ಹಲವೆಡೆ ಇದೇ ಸಮಸ್ಯೆ ಕಂಡು ಬಂದಿದೆ. ಭಾನುವಾರದಂದು ಕಲಬುರಗಿಯಲ್ಲಿ ದಾಖಲಾದ ಪ್ರಕರಣಗಳು ಕೇವಲ 10 ಆಗಿವೆ. ಬಾಗಲಕೋಟೆಯಲ್ಲಿ 46, ವಿಜಯಪುರದಲ್ಲಿ 35 ಹಾಗೂ ಯಾದಗಿರಿಯಲ್ಲಿ 44 ಪ್ರಕರಣಗಳು ಮಾತ್ರ ಪತ್ತೆಯಾಗಿರುವುದಾಗಿ ಸರ್ಕಾರಿ ಪ್ರಕಟಣೆಯಲ್ಲಿ ತೋರಿಸಲಾಗಿದೆ.

# ಅಭಿವೃದ್ಧಿಗೆ ಜಿಲ್ಲಾಡಳಿತ ಸನ್ನದ್ಧ

**(1ನೇ ಪುಟದಿಂದ)** ಫಲವಾಗಿ ಈಗಾಗಲೇ ನೀಲ ನಕ್ಷೆ ಸಿದ್ಧತೆ ಮಾಡಲಾಗುತ್ತದೆ. ಅದು ಸಿದ್ಧವಾದ ತಕ್ಷಣವೇ ಜಿಲ್ಲೆಯ ಎಲ್ಲಾ ಪ್ರವಾಸಿ ತಾಣಗಳು ಅಭಿವೃದ್ಧಿಯನ್ನು ಹೊಂದಲಿವೆ ಎಂದು ಹೇಳಿದರು.

ಸಾರ್ವಜನಿಕರು ಜಿಲ್ಲೆಯ ಪ್ರವಾಸಿ ತಾಣಗಳನ್ನು ವೀಕ್ಷಿಸುವುದರಿಂದ ಅವರಿಗೆ ಆರೋಗ್ಯ ಸುಧಾರಣೆ ಕಾಣುತ್ತದೆ ಮತ್ತು ನೆಮ್ಮದಿ ಜೀವನ ನಡೆಸುವುದಕ್ಕೆ ಸಹಕಾರಿ ಆಗಲಿದೆ. ಆದ್ದರಿಂದ ಸಾರ್ವಜನಿಕರು ಜಿಲ್ಲೆಯ ಪ್ರತಿಯೊಂದು ಯಾತ್ರಾ ಸ್ಥಳಗಳಿಗೆ ಭೇಟಿ ಕೊಡುವುದಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಪಾಲಾಕ್ಷ ಮಾತನಾಡಿ, ಜಿಲ್ಲೆಯ ಅನೇಕ ಪ್ರವಾಸಿ ತಾಣಗಳು ಇದ್ದು ಅವುಗಳು ಪುರಾತತ್ವ ಇಲಾಖೆಯ ಅಡಿಯಲ್ಲಿ ಬರುವುದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಕಾಣದೆ ಹಿಂದೆ ಬಿದ್ದಿವೆ. ಹಾಗಾಗಿ ಪುರಾತತ್ವ ಇಲಾಖೆಯ ಅಧಿಕಾರಿಗಳು ಇನ್ನು ಮುಂದೆಯಾದರೂ ಜಿಲ್ಲೆಯ ಅನೇಕ ಯಾತ್ರಾ ಸ್ಥಳಗಳ ಅಭಿವೃದ್ಧಿಗೆ ಹೆಚ್ಚು ಹೊತ್ತು ಕೊಡಬೇಕು ಎಂದು ಒತ್ತಾಯಿಸಿದರು.

ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಮಾತನಾಡಿ, ತಾಲ್ಲೂಕಿನ ಹರಿಹರೇಶ್ವರ ದೇವಾಲಯ, ಕೊಂಡಜ್ಜಿ ಕೆರೆ ಮತ್ತಿತರೆ ಯಾತ್ರಾ ಸ್ಥಳಗಳ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯ ಗಮನಕ್ಕೆ ತರಲಾಗಿದೆ. ಅವರು ಕೂಡ ಆದ್ಯತೆಯನ್ನು ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ಪುರಾತತ್ವ ಇಲಾಖೆಯ ಅಧಿಕಾರಿ ಸುಧಾಕರ್, ನೌಕರರ ಸಂಘದ ಗೌರವಾಧ್ಯಕ್ಷ ಎಂ.ಉಮ್ಮಣ್ಣ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಪ್ರವಾಸೋದ್ಯಮ ಇಲಾಖೆ ಅಧಿಕಾರಿ ಪಿ.ಟಿ. ಪ್ರಕಾಶ್, ನವೀನ್, ಮರುಳಸಿದ್ದಪ್ಪ, ಹರಿಹರೇಶ್ವರ ದೇವಸ್ಥಾನ ಕಾರ್ಯದರ್ಶಿ ವೆಂಕಟೇಶ್ ಹಾಗೂ ಇತರರು ಹಾಜರಿದ್ದರು.

# 'ರಿಯಲ್ ಎಸ್ಟೇಟ್'ಗೆ ಏರಿದ ಬೇಡಿಕೆ

**(1ನೇ ಪುಟದಿಂದ)** ವರ್ಷ ನವೆಂಬರ್‌ನಲ್ಲಿ ತೀರ್ಪು ನೀಡಿದ ನಂತರ ಜಮೀನಿನ ಬೆಲೆ ಶೇ.30-40ರಷ್ಟು ಹೆಚ್ಚಾಗಿತ್ತು. ಆಗಸ್ಟ್ 5ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಶಿಲಾನ್ಯಾಸ ನೆರವೇರಿಸಿದ ನಂತರ ಎರಡು ಪಟ್ಟು ಹೆಚ್ಚಾಗಿದೆ.

ಒಟ್ಟಾರೆ ಕಳೆದ ವರ್ಷಕ್ಕೆ ಹೋಲಿಸಿದರೆ ಕೆಲವೆಡೆ ಜಮೀನಿನ ಬೆಲೆ ಮೂರು ಪಟ್ಟು ಹೆಚ್ಚಾದ ಪ್ರಕರಣಗಳೂ ಇವೆ.

ಅಯೋಧ್ಯೆಯ ಹೊರ ವಲಯದಲ್ಲಿ ಈ ಹಿಂದೆ ಚದರಡಿ ಜಮೀನಿನ ಬೆಲೆ 400-500 ರೂ. ಇತ್ತು. ಅದೀಗ 1,000 - 1,500 ರೂ.ಗಳವರೆಗೆ ತಲುಪಿದೆ. ನಗರದ ಹೃದಯ ಭಾಗದಲ್ಲಿ ಜಮೀನಿನ ಲಭ್ಯತೆ ತೀರಾ ಕಡಿಮೆ ಇದೆ. ಅಲ್ಲಿ ಚದರಡಿ ಜಮೀನಿನ ಬೆಲೆ 2,000 ರೂ.ಗಳಿಂದ 3,000 ರೂ.ಗಳವರೆಗೆ ತಲುಪಿದೆ. ಸುಪ್ರೀಂ ಕೋರ್ಟ್ ತೀರ್ಪಿಗೆ ಮುಂಚೆ ಇಲ್ಲಿ ಜಮೀನನ್ನು ಚದರಡಿಗೆ 1,000 ರೂ.ಗಳಂತೆ ಖರೀದಿಸಬಹುದಿತ್ತು.

ಈ ಬಗ್ಗೆ ಮಾತನಾಡಿರುವ ಅಯೋಧ್ಯೆಯ ಅವಧ್ ವಿಶ್ವವಿದ್ಯಾನಿಲಯದ ಉಪನ್ಯಾಸಕ ವಿನೋದ್ ಕುಮಾರ್, ಆಸ್ತಿಯ ಬೆಲೆ ಈಗ ಗಗನಕ್ಕೆ ಏರುತ್ತಿದೆ. ಉದ್ಯಮಿಗಳಿಂದ ಹಿಡಿದು ಜನ ಸಾಮಾನ್ಯರವರೆಗೆ ಸಾಕಷ್ಟು ಜನರು ಜಾಗ ಖರೀದಿಗೆ ಮುಂದಾಗಿದ್ದಾರೆಂದು ತಿಳಿಸಿದ್ದಾರೆ.

ಆದರೆ, ಸರ್ಕಾರ ಮೂಲಭೂತ ಸೌಲಭ್ಯ ಯೋಜನೆ ಹಾಗೂ ಅದಕ್ಕೆ ಬೇಕಾದ ಜಮೀನಿನ ಅಗತ್ಯಗಳ ಕುರಿತು ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಹೀಗಾಗಿ ಇನ್ನೂ ಪೂರ್ಣ ಬೇಡಿಕೆ ಬಂದಿಲ್ಲ ಎಂದವರು ಹೇಳಿದ್ದಾರೆ. ಸ್ಥಳೀಯ ಆಡಳಿತ ಜಿಲ್ಲೆಯ ಹಲವೆಡೆ ಜಮೀನು ಖರೀದಿಯ ಮೇಲೆ ನಿರ್ಬಂಧ ಹೇರಿದೆ. ಅಯೋಧ್ಯೆಯಲ್ಲಿ ಸಾಕಷ್ಟು ಜಮೀನು ವಿವಾದದಲ್ಲಿದೆ. ಇದೆಲ್ಲವೂ ಸೇರಿ ಜಮೀನು ಲಭ್ಯತೆಯ ಪ್ರಮಾಣ ಕಡಿಮೆ ಮಾಡಿದೆ ಎಂದವರು ತಿಳಿಸಿದ್ದಾರೆ.

# ಇಂದು ಕರ್ನಾಟಕ ಬಂದ್‌ಗೆ ಕರೆ

**(1ನೇ ಪುಟದಿಂದ)** ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಯಾವುದೇ ಭೀತಿ ಇಲ್ಲದೇ ಎಂದಿನಂತೆ ಸಾಮಾನ್ಯ ಚಟುವಟಿಕೆಯಲ್ಲಿ ಭಾಗವಹಿಸಬೇಕೆಂದು ಜನತೆಗೆ ಕರೆ ನೀಡಿದ್ದಾರೆ. ತಮ್ಮ ಸರ್ಕಾರ ರೈತರ ಪರವಾಗಿದೆ. ಪ್ರತಿಭಟನೆ ನಡೆಸಲು ಯಾವುದೇ ಕಾರಣಗಳಿಲ್ಲ ಎಂದೂ ಅವರು ಹೇಳಿದ್ದಾರೆ.

# ಹರಿಹರ : ಬಂದ್‌ಗೆ ಕಾಂಗ್ರೆಸ್ ಬೆಂಬಲ

ರಾಜ್ಯ ಮತ್ತು ಕೇಂದ್ರ ಬಿಜೆಪಿ ಸರ್ಕಾರಗಳ ರೈತ ವಿರೋಧಿ ನೀತಿಯನ್ನು ಖಂಡಿಸಿ, ಇಂದು ಕರ್ನಾಟಕ ಬಂದ್‌ಗೆ ಕರೆ ನೀಡಿರುವ ರೈತ ಹೋರಾಟ ಸಮಿತಿಗಳಿಗೆ ಕಾಂಗ್ರೆಸ್ ಪಕ್ಷವು ಸಂಪೂರ್ಣ ಬೆಂಬಲ ಘೋಷಿಸಿದೆ. ಶಾಸಕ ಎಸ್.ರಾಮಪ್ಪನವರ ನೇತೃತ್ವದಲ್ಲಿ ಬೆಳಗ್ಗೆ 9 ಗಂಟೆಗೆ ಪಕ್ಕೀರಸ್ವಾಮಿ ಮಠದ ಮುಂಭಾಗದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಗಲಿದೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 26.09.2020 ರಂದು ನಿಧನರಾದ
ನಮ್ಮ ಆತ್ಮೀಯ ಮಿತ್ರರಾದ
**ಶ್ರೀ ಬಾಳೆಹೊಲದ ಬಸವರಾಜ್**
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಬಸವರಾಜ ಆಗ್ರೋ ಟ್ರೇಡರ್ಸ್, ದಾವಣಗೆರೆ.

**ಹೆಸರು ಸ್ಪಷ್ಟೀಕರಣ**
ಚನ್ನಗಿರಿ ತಾಲ್ಲೂಕು ಹಿರೇಕೋಗಲೂರು ವಾಸಿ ಶಿವಕುಮಾರ. ಹೆಚ್.ಎಸ್. ಬಿನ್ ಚಂದ್ರಶೇಖರಪ್ಪ.ಹೆಚ್ ಆದ ನಾನು ಸ್ಪಷ್ಟೀಕರಣ ನೀಡುವುದೇನೆಂದರೆ ನನ್ನ ಹೆಸರು ಆಧಾರ್ ಕಾರ್ಡ್ ಚುನಾವಣಾ ಗುರುತಿನ ಚೀಟಿಯಲ್ಲಿ ಹೆಚ್. ಎಸ್.ಶಿವಕುಮಾರ್ ಎಂದು, ಡಿ.ಎಲ್.ನಲ್ಲಿ ಶಿವಕುಮಾರಸ್ವಾಮಿ ಹೆಚ್. ಎಸ್.ಎಂದು ನಮೂದಿಸಲಾಗಿದ್ದು, ಈ ಎರಡೂ ಹೆಸರು ನನ್ನದೇ ಆಗಿದ್ದು ನನ್ನ ಎಲ್ಲಾ ವ್ಯವಹಾರಗಳಯ ಶಿವಕುಮಾರ ಹೆಚ್.ಎಸ್. ಎಂಬ ಹೆಸರಿನಲ್ಲೇ ನಡೆಯುತ್ತವೆ ಎಂದು ನೋಟರಿಯವರ ಸಮ್ಮುಖದಲ್ಲಿ ಪ್ರಮಾಣೀಕರಿಸಿದ್ದೇನೆ.
- ಶಿವಕುಮಾರಸ್ವಾಮಿ ಹೆಚ್.ಎಸ್

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 27.09.2020ರಂದು ನಿಧನರಾದ ಜೆ.ಹೆಚ್. ಪಟೇಲ್ ಕಾಲೇಜ್ ಸಂಸ್ಥಾಪಕರೂ, ನಮ್ಮ ಆತ್ಮೀಯ ಒಡನಾಡಿಗಳಾದ ಕ್ರಿಯಾಶೀಲ ವ್ಯಕ್ತಿತ್ವದ
**ಶ್ರೀ ದೊಗ್ಗಳ್ಳಿ ಗೌಡ್ರು ಪುಟ್ಟರಾಜು**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
**ಡಾ॥ ಹೆಚ್. ವಿಶ್ವನಾಥ್**
ನಿರ್ದೇಶಕರು, ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ ಗೌರವಾಧ್ಯಕ್ಷರು, ಜೆ.ಹೆಚ್.ಪಟೇಲ್ ಕಾಲೇಜ್ ಆಡಳಿತ ಮಂಡಳಿ.
**ಜೆ. ಈಶ್ವರ್‌ಸಿಂಗ್ ಕವಿತಾಳ**
ಬಿಂದಾಸ್ ಗ್ರೂಪ್, ದಾವಣಗೆರೆ.

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥
**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ॥ ಆಲೂರು ಗ್ರಾಮದ ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ ವಾಸಿ,
**ಶ್ರೀ ಸಾವಪ್ಪ ಎಸ್. ನಾರಪ್ಪ**
ನಿವೃತ್ತ ಇಂಜಿನಿಯರ್, VISL
**ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21.9.2020ನೇ ಸೋಮವಾರ ಬೆಳಿಗ್ಗೆ 5.30 ಕ್ಕೆ ನನ್ನ ಧರ್ಮಪತ್ನಿಯಾದ
**ಶ್ರೀಮತಿ ಟಿ. ನಾಗರತ್ನಮ್ಮ**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'**ಯನ್ನು ದಿನಾಂಕ 29.09.2020ನೇ ಮಂಗಳವಾರ ಬೆಳಿಗ್ಗೆ 10.30 ಕ್ಕೆ ನಿವೃತ್ತ ನೌಕರರ ಭವನ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀ ಸಾವಪ್ಪ ಎಸ್. ನಾರಪ್ಪ, ನಿವೃತ್ತ ಇಂಜಿನಿಯರ್ VISL ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಸಾವಪ್ಪ ವಂಶಸ್ಥರು, ಆಲೂರು ಹಾಗೂ ಬಂಧು-ಮಿತ್ರರು. ಮೊ.: 9844501366, 9481359219

**TO LET**
2BHK HOUSE, 1ST FLOOR, (ONLY VEG), SHOP GROUND FLOOR
B. T. GALLI, CHOWDAMBIKA TEMPLE ROAD DAVANGERE.
97392 65666

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451


**ಯಶೋಧಮ್ಮ ನಿಧನ**



ದಾವಣಗೆರೆ ಸಿದ್ದವೀರಪ್ಪ ಬಡಾವಣೆ ವಾಸಿ, ರೇಷ್ಮೆ ಇಲಾಖೆ ನಿವೃತ್ತ ಅಧಿಕಾರಿ ಈಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ಯಶೋಧಮ್ಮ (55) ಅವರು ದಿನಾಂಕ 27.09.2020ರಂದು ಭಾನುವಾರ ಸಂಜೆ 5 ಗಂಟೆಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪತಿ, ಓರ್ವಪುತ್ರ, ಓರ್ವಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.09.2020ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನಡೆಯಲಿದೆ.

**ಶ್ರೀಮತಿ ಕಮಲಮ್ಮ ನಿಧನ**




ದಾವಣಗೆರೆ ಎಂ.ಜಿ.ರಸ್ತೆ ಗಡಿಯಾರ ಕಂಬದ ಹತ್ತಿರದ ವಾಸಿ ದಿ.ಜಯದೇವಪ್ಪ ಉಪ್ಪಿನ್ ಇವರ ಧರ್ಮಪತ್ನಿ ಶ್ರೀಮತಿ ಕಮಲಮ್ಮ (67) ಅವರು ದಿನಾಂಕ 27.09.2020ರಂದು ಭಾನುವಾರ ರಾತ್ರಿ 8.15 ಕ್ಕೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.09.2020 ರಂದು ಸೋಮವಾರ ಮಧ್ಯಾಹ್ನ 1 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.


**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ಛಲವಾದಿ ಕೇರಿ ವಾಸಿ
**ಶ್ರೀ ಬಿ.ಎಸ್. ವೆಂಕಟೇಶ್**
ಮಹಾನಗರ ಪಾಲಿಕೆ
ಇವರು, ದಿನಾಂಕ : 16.09.2020ನೇ ಬುಧವಾರ ಮಧ್ಯಾಹ್ನ 12.10ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕಾರಣ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'**ಯನ್ನು
**ದಿನಾಂಕ: 28.09.2020 ನೇ ಸೋಮವಾರದಂದು ಮಧ್ಯಾಹ್ನ 12.00ಕ್ಕೆ ಮೃತರ ಸ್ವಗೃಹ ಛಲವಾದಿ ಕೇರಿ, ದಾವಣಗೆರೆಯಲ್ಲಿ ನೆರವೇರಿಸಲಾಗುವುದು.**
ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಖ ತಪ್ತರು : **ಶ್ರೀಮತಿ ರುದ್ರಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಬಂಧು-ಮಿತ್ರರು. ಮೊ: 81478-38023**
ವಿ.ಸೂ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನನೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



**ಭಾವಪೂರ್ಣ ಶ್ರದ್ಧಾಂಜಲಿ**
ದಿನಾಂಕ 26.09.2020 ರಂದು ನಿಧನರಾದ
ಶಿವ ಬ್ಯಾಂಕ್ ಆಡಳಿತ ಮಂಡಳಿಯ ಮಾಜಿ ನಿರ್ದೇಶಕರೂ, ದಾವಣಗೆರೆ ಜಿಲ್ಲಾ ರಸಗೊಬ್ಬರ ಬಿತ್ತನೆ ಬೀಜ, ಕೀಟನಾಶಕ ಮಾರಾಟಗಾರರ ಸಂಘದ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ
**ಶ್ರೀ ಬಾಳೆಹೊಲದ ಬಸವರಾಜ್**
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಕರೆಶಿವಪ್ಪ ಶ್ರೀ ರೇವಣಸಿದ್ದಪ್ಪ ಮತ್ತು ಮಕ್ಕಳು, ವರ್ತಕರು, ಎಪಿಎಂಸಿ ಯಾರ್ಡ್, ದಾವಣಗೆರೆ.
✦ ಬಾಳೆಹೊಲದ ಶ್ರೀ ಮಹೇಶ್ವರಪ್ಪ ಮತ್ತು ಮಕ್ಕಳು, ವರ್ತಕರು, ಎಪಿಎಂಸಿ ಯಾರ್ಡ್
✦ ಬಾಳೆಹೊಲದ ಶ್ರೀಮತಿ ಗೌರಮ್ಮ ಜಯಣ್ಣ ಮತ್ತು ಮಕ್ಕಳು
✦ ಬಾಳೆಹೊಲದ ಶ್ರೀ ರೇವಣಸಿದ್ದಪ್ಪ, ಶ್ರೀ ಆನಂದ ಮತ್ತು ಮಕ್ಕಳು, ವರ್ತಕರು
✦ ಬಾಳೆಹೊಲದ ಶ್ರೀ ಪ್ರಕಾಶ್, ನಾಗರಾಜ ಮತ್ತು ಮಕ್ಕಳು
✦ ಬಾಳೆಹೊಲದ ಶ್ರೀಮತಿ ಅನಸೂಯಮ್ಮ ಶೇಖರಪ್ಪ ಮತ್ತು ಮಕ್ಕಳು
✦ ಬಾಳೆಹೊಲದ ಶ್ರೀಮತಿ ರೇವಮ್ಮ ವಿರೂಪಾಕ್ಷಪ್ಪ ಮತ್ತು ಮಕ್ಕಳು, ಅಳಿಯಂದಿರು,
✦ ಬಾಳೆಹೊಲದ ಶ್ರೀ ಭರ್ಮನಗೌಡ್ರು ಮತ್ತು ಮಕ್ಕಳು ✦ ಕರೆಶಿವಪ್ಪ ಶ್ರೀ ಭರ್ಮಪ್ಪ ಮತ್ತು ಮಕ್ಕಳು, ಹರಿಹರ.
✦ ಕರೆಶಿವಪ್ಪ ಶ್ರೀ ನಾಗಲಿಂಗಪ್ಪ ಮತ್ತು ಮಕ್ಕಳು, ಅಳಿಯಂದಿರು
✦ ಕರೆಶಿವಪ್ಪ ಶ್ರೀ ಬಸಣ್ಣ ಮತ್ತು ಮಕ್ಕಳು, ಕೆ.ಹೆಚ್.ಬಿ. ಕಾಲೋನಿ
✦ ಕರೆಶಿವಪ್ಪ ಶ್ರೀ ಶೇಖರಪ್ಪ ಮತ್ತು ಮಕ್ಕಳು
✦ ಕರೆಶಿವಪ್ಪ ಶ್ರೀ ಬಸವರಾಜು, ಈಶ್ವರಪ್ಪ ಮತ್ತು ಮಕ್ಕಳು, ವರ್ತಕರು
✦ ಕರೆಶಿವಪ್ಪ ಶ್ರೀ ಕೆ.ಸಿ. ಧರಣೇಂದ್ರಪ್ಪ, ಕೆ.ಸಿ.ಪ್ರಕಾಶ್ ಹಾಗೂ ಮಕ್ಕಳು, ವರ್ತಕರು
✦ ಕರೆಶಿವಪ್ಪ ಶ್ರೀ ಜಯ್ಯಣ್ಣ ಮತ್ತು ಮಕ್ಕಳು ✦ ತೆಲಗಿ ಶ್ರೀ ಜಯಣ್ಣ ಮತ್ತು ಸಹೋದರರು, ಮಕ್ಕಳು
✦ ಬಾಳೆಹೊಲದ ವಂಶಸ್ಥರು. ✦ ಕರೆಶಿವಪ್ಪ ವಂಶಸ್ಥರು, ದಾವಣಗೆರೆ.

**Wanted**
Urgent Requirement for BDE (Business Development Executive) and BDM (Business Development Manager) for gold Buying Company with attractive Salary,Location : Davangere, Qualification : Any Degree, Minimum 5 years Experience in Field. Interested Please Contact : 96068 03777

**ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ನೇರ ಪರಿಹಾರ**
ಧರ್ಮಸ್ಥಳದ ಹಿರಿಯ ಬ್ರಾಹ್ಮಣ ಅರ್ಚಕರಿಂದ ಕೇವಲ 3 ದಿನದಲ್ಲಿ ಕೌಟುಂಬಿಕ ಕಲಹ, ಆರೋಗ್ಯ, ಸಂತಾನ, ವ್ಯಾಪಾರ, ರಾಜಕೀಯ, ಉದ್ಯೋಗ, ನಿಮ್ಮ ಯಾವುದೇ ತೊಂದರೆಗಳಿಗೂ ಚಿಂತೆ ಬೇಡ. ಇಂದೇ ಕರೆಮಾಡಿ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು.
ಪಂ: ಸುಬ್ರಮಣ್ಯ ಗುರೂಜಿ
97417 65669

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧ, ಬೆಡ್‌ರಿಡನ್, ಮಾನಸಿಕ, ಅಂಗವಿಕಲ, ಬುದ್ಧಿ ಮಾಂದ್ಯರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು.
ನಿಟ್ಟುವಳ್ಳಿ, ಹೊಸ ಬಡಾವಣೆ, ದಾವಣಗೆರೆ.
89711 92936
76250 15036

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

# ರೈಲ್ವೆ ಕೋಣೆಯಲ್ಲಿ ಸಾಮೂಹಿಕ ಅತ್ಯಾಚಾರ

**ಭೂಪಾಲದ ಇಬ್ಬರು ಇಂಜಿನಿಯರ್‌ಗಳ ಅಮಾನತ್ತು**

ಭೂಪಾಲ್, ಸೆ. 27 - ರೈಲ್ವೆ ನಿಲ್ದಾಣದ ಕೋಣೆಯಲ್ಲಿ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ಇಬ್ಬರು ಇಂಜಿನಿಯರ್‌ಗಳನ್ನು ಪಶ್ಚಿಮ ಕೇಂದ್ರ ರೈಲ್ವೆ ಅಮಾನತ್ತುಗೊಳಿಸಿದೆ.

ಕಿರಿಯ ಇಂಜಿನಿಯರ್ ರಾಜೇಶ್ ತಿವಾರಿ ಹಾಗೂ ಹಿರಿಯ ಸೆಕ್ಷನ್ ಇಂಜಿನಿಯರ್ ಅಲೋಕ್ ಮಾಳವೀಯ ಎಂಬುವವರು ಉತ್ತರ ಪ್ರದೇಶದ 22 ವರ್ಷದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಫೇಸ್‌ಬುಕ್ ಮೂಲಕ ಮಹಿಳೆಯ ಜೊತೆ ಸ್ನೇಹ ಬೆಳೆಸಿಕೊಂಡಿದ್ದ ತಿವಾರಿ, ಉದ್ಯೋಗ ಕೊಡಿಸುವ ಆಮಿಷ ಒಡ್ಡಿ ಇಲ್ಲಿಗೆ ಕರೆಸಿಕೊಂಡಿದ್ದಾಗಿ ಭೂಪಾಲ್ ಪೊಲೀಸ್ ವರಿಷ್ಠಾಧಿಕಾರಿ (ರೈಲ್ವೆ) ಹಿತೇಶ್ ಚೌಧರಿ ತಿಳಿಸಿದ್ದಾರೆ.

ಮಹಿಳೆ ಶನಿವಾರ ಇಲ್ಲಿಗೆ ಬಂದಾಗ ತಿವಾರಿ ರೈಲ್ವೆ ನಿಲ್ದಾಣದ ಕೋಣೆಗೆ ಕರೆದೊಯ್ದಿದ್ದ. ಅಲ್ಲಿ ತಿವಾರಿ ಹಾಗೂ ಮಾಳವೀಯ ಮಾದಕ ಬೆರೆಸಿದ್ದ ಪಾನೀಯ ನೀಡಿ ಪ್ರಜ್ಞೆ ಕಳೆದ ನಂತರ ಅತ್ಯಾಚಾರ ಎಸಗಿದ್ದಾಗಿ ದೂರಲಾಗಿದೆ.

ಈ ಬಗ್ಗೆ ಭೂಪಾಲ್ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಇಬ್ಬರ ವಿರುದ್ಧ ತನಿಖೆ ಆರಂಭಿಸಿದ್ದು, ಅಮಾನತ್ತು ಕ್ರಮ ತೆಗೆದುಕೊಳ್ಳಲಾಗಿದೆ.

## ಭಿನ್ನಮತ : ಮುರಿದ ಬಿಜೆಪಿ-ಅಕಾಲಿ ಮೈತ್ರಿ

**(1ನೇ ಪುಟದಿಂದ)** ಆಗಿನಿಂದಲೂ ಮೈತ್ರಿಯಲ್ಲಿ ಒಡಕು ಇದ್ದೇ ಇತ್ತು. ಪಂಜಾಬ್‌ನಲ್ಲಿ ಬಿಜೆಪಿ ಮುಖ್ಯಮಂತ್ರಿ ಕಾಣಬೇಕು ಎಂದು ಪಕ್ಷದ ಕಾರ್ಯಕರ್ತರು ಕನಸು ಕಾಣುತ್ತಿರುವುದಾಗಿ ಹಲವು ನಾಯಕರು ಹೇಳಿದ್ದು, ಮೈತ್ರಿಗೆ ಮತ್ತಷ್ಟು ಹುಳಿ ಹಿಂಡಿತ್ತು. ಈ ವರ್ಷದಲ್ಲೇ ಬಿಜೆಪಿ ತನ್ನ ಎರಡು ಹಳೆಯ ಮೈತ್ರಿ ಪಕ್ಷಗಳನ್ನು ಕಳೆದುಕೊಂಡಿದೆ. ಇದಕ್ಕೂ ಮುಂಚೆ ಶಿವಸೇನೆ ಎನ್.ಡಿ.ಎ. ತೊರೆದಿತ್ತು.

# ಕೊಂಡೋದಿ ಕನ್ನಡವನ್ನು ಬೆಳೆಸಿ : ವೈಎಸ್‌ವಿ ದತ್ತ



**ಕನ್ನಡಕ್ಕಾಗಿ ರಕ್ತ ಕೊಟ್ಟೇವು ಎಂಬ ಅಭಿಮಾನದ ಮಾತಿಗಿಂತ, ಹೆಚ್ಚಾಗಿ ಕನ್ನಡ ಪುಸ್ತಕಗಳನ್ನು ಓದಿದರೆ ಭಾಷೆ ಉಳಿಯುತ್ತದೆ**

ದಾವಣಗೆರೆ, ಸೆ. 27 – ಕನ್ನಡಕ್ಕಾಗಿ ರಕ್ತವನ್ನಾದರೂ ಕೊಡುತ್ತೇನೆ ಎಂಬ ಉದ್ವೇಗದ ಮಾತುಗಳಿಗಿಂತ, ಕನ್ನಡದ ಪುಸ್ತಕಗಳನ್ನು ಕೊಂಡು ಓದಿದಾಗ ಕನ್ನಡ ಹಾಗೂ ಸಾಹಿತ್ಯ ಬೆಳವಣಿಗೆಯಾಗುತ್ತದೆ ಎಂದು ಮಾಜಿ ಶಾಸಕ ವೈ.ಎಸ್.ವಿ. ದತ್ತ ಅಭಿಪ್ರಾಯ ಪಟ್ಟಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ದಿ. ಶಿವಲಿಂಗಪ್ಪ ಚಾರಿಟೇಬಲ್ ಟ್ರಸ್ಟ್‌ಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಪಾಪು ಗುರು ಅವರ 'ಸೂಜಿ' ಕಾದಂಬರಿ ಲೋಕಾರ್ಪಣೆ ಮಾಡಿ ಅವರು ಮಾತನಾಡುತ್ತಿದ್ದರು.

ಕೃತಿಯೊಂದನ್ನು ಬಿಡುಗಡೆ ಮಾಡಿದ್ದಕ್ಕಿಂತ ಕೃತಿಗೆ ಮಾನ್ಯತೆ ಸಿಕ್ಕಾಗ ಕೃತಿಕಾರನಿಗೆ ಹೆಚ್ಚು ಸಂತೋಷವಾಗುತ್ತದೆ. ಕೃತಿಯನ್ನು ಜನರು ಕೊಂಡು ಓದಿದಾಗ, ಹಂಚಿಕೊಂಡಾಗ, ಚರ್ಚೆ, ವಿಮರ್ಶೆ ನಡೆಸಿದಾಗ ಕೃತಿಗೆ ಸಾರ್ಥಕತೆ ಸಿಗುತ್ತದೆ ಎಂದವರು ತಿಳಿಸಿದರು.

ಆದರೆ, ಕನ್ನಡದಲ್ಲಿ ಪುಸ್ತಕ ಕೊಂಡು ಓದುವ ಜಾಯಮಾನ ಬೆಳೆದಿಲ್ಲ. ಸಾವಿರಾರು ಜನರನ್ನು ಸೇರಿಸಿ ಬಿಡುಗಡೆ ಮಾಡಿದ ಪುಸ್ತಕಗಳೂ ಸಹ ಮಾರಾಟವಾಗುವುದಿಲ್ಲ. ನಾನು ಪ್ರಕಾಶನ ಮಾಡಿಸಿದ ಹಲವಾರು ಪುಸ್ತಕಗಳ ನೂರಾರು ಪ್ರತಿಗಳು, ನನ್ನ ಮನೆಯಲ್ಲೇ ಮಾರಾಟವಾಗದೇ ಪಳಿಯುಳಿಕೆಗಳಾಗಿ ಉಳಿದಿವೆ ಎಂದವರು ವಿಷಾದಿಸಿದರು.

ಕನ್ನಡದ ಅಭಿಮಾನಕ್ಕಾಗಿ ರಕ್ತ ಕೊಟ್ಟೇವು ಎಂದು ಹೇಳುತ್ತಾರೆ. ಅಷ್ಟು ಮಾಡುವುದು ಬೇಡ, ರಕ್ತ ಅಮೂಲ್ಯ. ಅದರ ಬದಲು ಪುಸ್ತಕವನ್ನು ಖರೀದಿಸಿ. ಕನ್ನಡ ಉಳಿಸುವ ಪರಿ ಇದು ಎಂದವರು ಹೇಳಿದರು.

ಪ್ರೇಮ ಹಾಗೂ ಕಾಮಗಳು ಕೃತಿಗಳಲ್ಲಿ ಇರಬೇಕಾದ ಅಗತ್ಯಗಳ ಕುರಿತು ಮಾತನಾಡಿದ ದತ್ತ, ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷಗಳ ಜೀವನ ಮಾರ್ಗದ ಬಗ್ಗೆ ಋಷಿಗಳು ಮಾತನಾಡಿದ್ದಾರೆ. ಹೀಗಾಗಿ ಕಾಮ ಸಹ ತಿರಸ್ಕಾರಕ್ಕೆ ಯೋಗ್ಯವಲ್ಲ. ಅಲ್ಲೂ ಉನ್ನತೀಕರಣ, ಜೀವನೋತ್ಸಾದ ಶಕ್ತಿ ಸಾಧ್ಯತೆ ಇದೆ ಎಂದು ತಿಳಿಸಿದರು.

ಪಾಪು ಗುರು ಅವರು ಪತ್ರಿಕೆ ಹಂಚುವ, ಬಡಗಿ, ಮೆಕ್ಯಾನಿಕ್ ಹೀಗೆ ಹಲವು ಕೆಲಸಗಳಲ್ಲಿ ತೊಡಗಿಕೊಳ್ಳುತ್ತಲೇ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಬದುಕು, ಜೀವನಾಸಕ್ತಿ, ಅನುಭವ, ಸಮಾಜಮುಖಿ ನಿಲುವಿಗೆ ಅಕ್ಷರ ರೂಪ ಕೊಡಲು ಅಂಥವರಿಂದ ಸಾಧ್ಯ ಎಂದು ದತ್ತ ಅಭಿಪ್ರಾಯ ಪಟ್ಟರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಅಹಂಕಾರ ಹಾಗೂ ಪೂರ್ವಾಗ್ರಹ ಪೀಡಿತವಾದ ಸಾಹಿತ್ಯ ಎಲ್ಲರನ್ನೂ ತಲುಪಲು ಸಾಧ್ಯವಿಲ್ಲ. ವಚನ ಸಾಹಿತ್ಯದಲ್ಲಿ ಇಂತಹ ಗುಣಗಳಿಲ್ಲದ ಕಾರಣ ಅದು ಇಂದಿಗೂ ಎಲ್ಲರನ್ನೂ ತಲುಪುತ್ತಿದೆ ಎಂದು ಹೇಳಿದರು.

ಸಾಹಿತ್ಯ ಕಲಿಸಬಹುದಾದ ವಿದ್ಯೆಯಲ್ಲ. ಅದು ಅನುಭವ, ಆಸಕ್ತಿ ಹಾಗೂ ಸೃಜನಶೀಲತೆಯಿಂದ ಬರುತ್ತದೆ. ಸಾಹಿತ್ಯ ಸಮಾಜದ ಪ್ರತಿಬಿಂಬವಾಗಿದ್ದು, ರಾಷ್ಟ್ರದ ಸಂಸ್ಕೃತಿಯ ವಿಕಾಸಕ್ಕೂ ಕಾರಣವಾಗುತ್ತದೆ ಎಂದವರು ಹೇಳಿದರು.

ಕೃತಿಯ ಕುರಿತು ಮಾತನಾಡಿದ ಉಪನ್ಯಾಸಕ ಡಾ. ಎ.ಬಿ. ರಾಮಚಂದ್ರಪ್ಪ, ಈ ಕೃತಿಯನ್ನು ಓದಿದಾಗ ಪ್ರಗತಿಶೀಲ ಕಾದಂಬರಿಯ ಅನುಭವವಾಯಿತು. ಪ್ರಗತಿಶೀಲರು ಬರೆದೇ ಬದುಕು ಕಟ್ಟಿಕೊಳ್ಳಬೇಕಿತ್ತು. ಅಂತಹ ಪರಿಶ್ರಮ ಈ ಕಾದಂಬರಿಯಲ್ಲಿದೆ ಎಂದು ತಿಳಿಸಿದರು.

ವೇದಿಕೆಯ ಮೇಲೆ ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್ ಉಪಸ್ಥಿತರಿದ್ದರು. ನಿವೃತ್ತ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಅಧ್ಯಕ್ಷತೆ ವಹಿಸಿದ್ದರು.

ಪತ್ರಕರ್ತ ಎ. ಫಕೃದ್ದೀನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜೆ.ಬಿ. ಆಕಾಶ್ ಪ್ರಾರ್ಥಿಸಿದರು. ದಾಗಿನಕಟ್ಟೆ ಪರಮೇಶ್ವರಪ್ಪ ಸ್ವಾಗತಿಸಿದರೆ, ಗಂಗಾಧರ ನಿಟ್ಟೂರು ನಿರೂಪಿಸಿದರು.

# ಬಂದ್ ಬೆಂಬಲಿಸಿ ಕನ್ನಡಪರ ಸಂಘಟನೆಗಳ ಹೋರಾಟ



ದಾವಣಗೆರೆ, ಸೆ.27- ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ರೈತ-ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ಖಂಡಿಸಿ, ನಾಳೆ ಸೋಮವಾರ ಕರೆ ನೀಡಿರುವ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಿ ಹೋರಾಟ ನಡೆಸಲು ಜಿಲ್ಲೆಯ ಕನ್ನಡ ಪರ ಸಂಘಟನೆಗಳು ತೀರ್ಮಾನಿಸಿವೆ.

ಈ ಸಂಬಂಧ ನಗರದ ರೋಟರಿ ಬಾಲಭವನದಲ್ಲಿ ಇಂದು ನಡೆದ ಕನ್ನಡ ಪರ ಸಂಘಟನೆಗಳ ಒಕ್ಕೂಟದ ಪೂರ್ವಭಾವಿ ಸಭೆಯಲ್ಲಿ ನಾಳೆ ಸೋಮವಾರ ಬೆಳಿಗ್ಗೆ 8 ಗಂಟೆಗೆ ನಗರದ ಜಯದೇವ ವೃತ್ತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿಕೃತಿ ದಹಿಸಲು ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು. ಹತ್ತಾರು ಕನ್ನಡ ಪರ ಸಂಘಟನೆಗಳು ಒಂದೇ ವೇದಿಕೆಯಡಿ ಮುಂದಿನ ದಿನಗಳಲ್ಲಿ ನೆಲ-ಜಲ, ಭಾಷೆ, ರೈತರ ವಿಚಾರವಾಗಿ ಒಗ್ಗಟ್ಟಾಗಿ ಹೋರಾಟ ಮಾಡಲು ನಿರ್ಧರಿಸಲಾಯಿತು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಮಾತನಾಡಿ, ಒಳ್ಳೆಯ ಮನಸ್ಸುಗಳನ್ನು ಒಗ್ಗೂಡಿಸಿ ಸದೃಢವಾದ ಒಕ್ಕೂಟ ರೂಪಿಸುವ ಅಗತ್ಯವಿದೆ. ಈ ಹಿಂದೆ ಕನ್ನಡ ಪರ ಸಂಘಟನೆಗಳ ಹೋರಾಟಗಳಲ್ಲಿ ಐಕ್ಯತೆ, ಹೊಂದಾಣಿಕೆ ಇತ್ತು. ಅಂದಿನ ಹೋರಾಟಗಳು ಯಶಸ್ವಿಯಾಗುತ್ತಿದ್ದವು. ಇಂದು ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತಿದೆ ಎಂದರು.

ಹಿರಿಯ ರಂಗಕರ್ಮಿ ಎ. ಭದ್ರಪ್ಪ ಮಾತನಾಡಿ, ಯುವಕರಲ್ಲಿ ಹೋರಾಟದ ಕಿಚ್ಚಿದೆ. ಆದರೆ ಪ್ರತಿಷ್ಠೆ ಅಡ್ಡ ಬಂದು ಸಂಘಟನೆಗಳು ಛಿದ್ರವಾಗುತ್ತಿವೆ. ದಾವಣಗೆರೆ ಅನೇಕ ಚಳವಳಿಗಳನ್ನು ಹುಟ್ಟು ಹಾಕಿದ ನೆಲ. ಇನ್ನು ಮುಂದಾದರೂ ಎಲ್ಲ ಕನ್ನಡ ಪರ ಸಂಘಟನೆಗಳು ನಾಡು-ನುಡಿ ವಿಚಾರದಲ್ಲಿ ಒಗ್ಗಟ್ಟಾಗಬೇಕಿದೆ ಎಂದರು.

ರೈತ ಮುಖಂಡ ಹೊನ್ನೂರು ಮುನಿಯಪ್ಪ ಮಾತನಾಡಿ, ಸೋಮವಾರದ ಬಂದ್‌ಗೆ ಎಲ್ಲ ಕನ್ನಡ ಪರ ಸಂಘಟನೆಗಳು ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣ ಗೌಡ ಬಣದ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ವೈಯಕ್ತಿಕ ಹಿತಾಸಕ್ತಿಗಳಿದ್ದರೆ ಸಂಘಟನೆಗಳು ಪ್ರತ್ಯೇಕ ಹೋರಾಟ ಮಾಡಿಕೊಳ್ಳಲಿ. ಆದರೆ ನಾಡು-ನುಡಿ ವಿಷಯದಲ್ಲಿ ಎಲ್ಲ ಸಂಘಟನೆಗಳು ಒಕ್ಕೊರಲ ಧ್ವನಿಯಾಗಬೇಕು. ನಾಳಿನ ಬಂದ್‌ಗೆ ಎಲ್ಲರೂ ಸಂಪೂರ್ಣ ಸಹಕಾರ ನೀಡಬೇಕು ಎಂದರು.

ಅಖಂಡ ಕರ್ನಾಟಕ ರಕ್ಷಣಾ ವೇದಿಕೆಯ ಸೋಮಶೇಖರ್, ಆಟೋ ಚಾಲಕರ ಸಂಘದ ಅಧ್ಯಕ್ಷ ಕರಿಯಪ್ಪ ಸೇರಿದಂತೆ ಕನ್ನಡ ಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ತಮ್ಮ ಅನಿಸಿಕೆ ಹಂಚಿಕೊಂಡರು.

ನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ್‌ಕುಮಾರ್ ಅವರು ಸಭೆಯನ್ನು ಉದ್ಘಾಟಿಸಿದರು. ಕನ್ನಡ ಪರ ಹೋರಾಟಗಾರ ಕೆ.ಜಿ. ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸೋಮಶೇಖರ್, ನಾಗರಾಜ್ ಗೌಡ, ಸಂತೋಷ್, ದಾಕ್ಷಾಯಣಮ್ಮ ಸೇರಿದಂತೆ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣ, ನಾರಾಯಣ ಗೌಡ ಬಣ, ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ, ಅಸಂಘಟಿತ ಕಾರ್ಮಿಕರ ವೇದಿಕೆ, ಕರುನಾಡು ಸಮರ ಸೇನೆ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ, ಡಾ. ರಾಜ್‌ಕುಮಾರ್ ಅಭಿಮಾನಿ ಬಳಗ, ಗಜಸೇನೆ ಸೇರಿದಂತೆ ಹತ್ತಕ್ಕೂ ಅಧಿಕ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

## ಎಪಿಎಂಸಿಯಲ್ಲಿನ ಶೋಷಣೆ ಕಾಣುತ್ತಿಲ್ಲವೇ ?

ದಾವಣಗೆರೆ, ಸೆ.25- ಎಪಿಎಂಸಿ ಕಾಯ್ದೆ, ಭೂ ಸುಧಾರಣೆ ಕಾಯ್ದೆ ತಿದ್ದುಪಡಿಯನ್ನು ವಿರೋಧಿಸಿ, ಹೋರಾಟ ನಡೆಸುತ್ತಿರುವ ರೈತ ಸಂಘಟನೆಗಳು ಎಪಿಎಂಸಿ ವ್ಯವಸ್ಥೆಯಲ್ಲಿ ರೈತರಿಗೆ ನಿತ್ಯ ಆಗುತ್ತಿರುವ ಅನ್ಯಾಯದ ವಿರುದ್ಧ ಏಕೆ ಹೋರಾಟ ನಡೆಸುತ್ತಿಲ್ಲ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ.ಸತೀಶ್ ಪ್ರಶ್ನಿಸಿದ್ದಾರೆ.

ಜಿಲ್ಲೆಯಲ್ಲಿ 1.50 ಲಕ್ಷ ಎಕರೆಯಲ್ಲಿ ಭತ್ತ ಬೆಳೆಯಲಾಗುತ್ತಿದೆ. 4 ಲಕ್ಷ ಟನ್ ಭತ್ತ ಉತ್ಪಾದನೆಯಾಗುತ್ತಿದ್ದು, 1 ಲಕ್ಷ ಟನ್ ಮಾತ್ರ ಎಪಿಎಂಸಿಯಲ್ಲಿ ಮಾರಾಟವಾಗುತ್ತಿದೆ. ಹೀಗಾಗಿ ಎಪಿಎಂಸಿ ಹಾಗೂ ಹೊರಗಡೆ ಮಾರಿದಾಗ ರೈತರಿಗೆ ಆಗುವ ಅನುಕೂಲ ಹಾಗೂ ಅನಾನುಕೂಲಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

## ದೊಗ್ಗಳ್ಳಿ ಗೌಡ್ರ ಪುಟ್ಟರಾಜು ನಿಧನ

**(1ನೇ ಪುಟದಿಂದ)** ಸಲ್ಲಿಸುತ್ತಿದ್ದರು. ಧರ್ಮಪತ್ನಿ - ಜೆ.ಹೆಚ್.ಪಟೇಲ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪ್ರತಿಭಾ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಸ್ಥಳೀಯ ಸಿದ್ದವೀರಪ್ಪ ಬಡಾವಣೆ 7ನೇ ತಿರುವಿನಲ್ಲಿರುವ ಅವರ ಸ್ವಗೃಹದಲ್ಲಿ ಇಡಲಾಗಿದ್ದು, ನಾಳೆ ದಿನಾಂಕ 28ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಸಂಕ್ಷಿಪ್ತ ಪರಿಚಯ** : ಹರಿಹರ ತಾಲ್ಲೂಕಿನ ದೊಗ್ಗಳ್ಳಿ ಗ್ರಾಮದ ಗೌಡ್ರ ರೇವಣಪ್ಪ ಪುತ್ರರಾದ ಪುಟ್ಟರಾಜು ಅವರು ಕಾನೂನು ಪದವೀಧರರಾಗಿದ್ದರು. ಆರಂಭದಲ್ಲಿ ಪತ್ರಿಕೋದ್ಯಮದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು, ಹಲವಾರು ಲೇಖನಗಳನ್ನು ಬರೆದಿದ್ದರು.

ವಿದ್ಯಾರ್ಥಿ ದೆಸೆಯಿಂದಲೇ ಹಲವಾರು ಸಂಘಟನೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗುವುದರ ಮೂಲಕ ಸಮಾಜದಲ್ಲಿ ಗುರುತಿಸಿಕೊಂಡಿದ್ದರು. ಸಾಮಾಜಿಕ ಸಂಘಟನೆಗಳಿಂದ ಮಕ್ಕಳ ಬೇಸಿಗೆ ಶಿಬಿರ, ಟ್ರಕ್ಕಿಂಗ್ ಕ್ಯಾಂಪ್, ಯುವ ಜನ ಮೇಳ, ಯುವಜನೋತ್ಸವ, ಸ್ಕೌಟ್ಸ್ ಮತ್ತು ಗೈಡ್ಸ್ ಶಿಬಿರಗಳು ಸೇರಿದಂತೆ, ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಶಿಕ್ಷಣ, ಸಾಕ್ಷರತೆ ಮತ್ತು ಪರಿಸರಕ್ಕೆ ಸಂಬಂಧಿಸಿದಂತಹ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು.

ಮಕ್ಕಳನ್ನು ಪತ್ರಿಕಾಲಯಗಳಿಗೆ, ಪೊಲೀಸ್ ಠಾಣೆಗಳಿಗೆ, ಉಪಬಂಧೀಖಾನೆಗಳಿಗೆ ಕರೆದೊಯ್ದು ಅಲ್ಲಿನ ವ್ಯವಸ್ಥೆಯನ್ನು ತೋರಿಸುವುದರ ಮೂಲಕ ತಿಳುವಳಿಕೆ ನೀಡುವ ಕೆಲಸದಲ್ಲಿ ಮುಂಚೂಣಿಯಲ್ಲಿದ್ದರು. ಇದರಿಂದಾಗಿ ಪುಟ್ಟರಾಜು ಮಕ್ಕಳಿಗೆ ಮತ್ತು ಯುವಕರಿಗೆ ಸ್ಫೂರ್ತಿದಾಯಕರಾಗಿದ್ದರು.

**ಸಂತಾಪ** : ದೊಗ್ಗಳ್ಳಿ ಗೌಡ್ರ ಪುಟ್ಟರಾಜು ನಿಧನಕ್ಕೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ದಾವಣಗೆರೆ ವಿವಿ ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ|| ಹೆಚ್.ವಿಶ್ವನಾಥ್, ಬಿಂದಾಸ್ ಗ್ರೂಪ್‌ನ ಜೆ.ಈಶ್ವರ್‌ಸಿಂಗ್ ಕವಿತಾಳ್, ಜ್ಞಾನ ವಿಜ್ಞಾನ ಪರಿಷತ್ತಿನ ಗುರುಸಿದ್ದಸ್ವಾಮಿ, ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ನಗರ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್ ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಬಂದ್‌ಗೆ ಜೆಡಿಎಸ್, ಕಾಂಗ್ರೆಸ್, ವಿವಿಧ ಸಂಘಟನೆಗಳ ಬೆಂಬಲ

ದಾವಣಗೆರೆ, ಸೆ.27- ಎಪಿಎಂಸಿ, ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ವಿರೋಧಿಸಿ ವಿವಿಧ ಸಂಘಟನೆಗಳ ಬಂದ್ ಕರೆಗೆ ಜೆಡಿಎಸ್ ಬೆಂಬಲ ಸೂಚಿಸಿದೆ.

ಕಾಯ್ದೆಗಳ ತಿದ್ದುಪಡಿ ಅಂಗೀಕಾರಕ್ಕೆ ಜೆಡಿಎಸ್ ಬೆಂಬಲ ಸೂಚಿಸಿದ್ದರೂ ಕಾಯ್ದೆಗೆ ಸಂಬಂಧಪಟ್ಟ ಕೆಲವೊಂದು ವಿಚಾರಗಳಲ್ಲಿ ಗೊಂದಲಗಳು ಇವೆ. ಅದಕ್ಕೆ ವಿರೋಧವಿದೆ. ಸೋಮವಾರ ನಡೆಯುವ ಬಂದ್‌ಗೆ ಸಂಪೂರ್ಣ ಬೆಂಬಲವಿದೆ ಎಂದು ಇಂದಿಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಟಿ. ಮಹಮ್ಮದ್ ಗೌಸ್ ತಿಳಿಸಿದ್ದಾರೆ.

ಜೆಡಿಎಸ್ ರಾಜ್ಯ ರೈತ ಮಹಿಳಾ ಘಟಕದ ಅಧ್ಯಕ್ಷೆ ಚೈತ್ರಾ ಗೌಡ, ಶಿರಾ ಕ್ಷೇತ್ರದ ಆಕಾಂಕ್ಷಿ ಶ್ರೀಧರ್ ಪಾಟೀಲ್ ಮಾತನಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ಜಿ.ಎಂ. ಭಾಷಾ ಇದ್ದರು.

ಕಾಂಗ್ರೆಸ್ ಬೆಂಬಲ : ಬಂದ್‌ಗೆ ಕಾಂಗ್ರೆಸ್ ಪಕ್ಷವು ಬೆಂಬಲ ನೀಡಿದ್ದು, ಯಶಸ್ವಿಗೊಳಿಸುವಂತೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಬಿ.ಹೆಚ್.ವೀರಭದ್ರಪ್ಪ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ಜಿಲ್ಲಾಧ್ಯಕ್ಷರಾದ ಜೆ.ಸೌಮ್ಯ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಜಿಲ್ಲಾ ಸಂಚಾಲಕರಾದ ಕೆ.ಹೆಚ್.ಆನಂದರಾಜ್ ಅವರುಗಳು ಬಂದ್‌ಗೆ ಬೆಂಬಲಿಸಿದ್ದಾರೆ.

# ಬಿಜೆಪಿ ಸ್ಥಾಪಕ ಸದಸ್ಯ ಜಸ್ವಂತ್ ಸಿಂಗ್ ನಿಧನ

**(1ನೇ ಪುಟದಿಂದ)** ಮತ್ತೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಅಂತ್ಯಕ್ರಿಯೆ ರಾಜಸ್ಥಾನದಲ್ಲಿರುವ ಜೋಧಪುರದಲ್ಲಿ ನೆರವೇರಿಸಲಾಗಿದೆ.

> **“ 1980ರಲ್ಲಿ ಬಿಜೆಪಿ ಸ್ಥಾಪನೆಯಾದ ಕಾಲದಿಂದಲೂ ಅವರು ಪಕ್ಷದ ಜೊತೆ ಗುರುತಿಸಿಕೊಂಡಿದ್ದರು. ಎರಡು ಬಾರಿ ಅವರು ಪಕ್ಷದಿಂದ ಉಚ್ಚಾಟಿಸಲ್ಪಟ್ಟಿದ್ದರು. 'ಜಿನ್ನಾ - ಇಂಡಿಯಾ, ಪಾರ್ಟಿಷನ್, ಇಂಡಿಪೆಂಡೆನ್ಸ್' ಪುಸ್ತಕ ಪ್ರಕಟಿಸಿದ ನಂತರ ಅವರನ್ನು 2009ರಲ್ಲಿ ಉಚ್ಚಾಟಿಸಲಾಗಿತ್ತು.**
>
> **ಹತ್ತು ತಿಂಗಳ ನಂತರ ಅವರು ಪಕ್ಷಕ್ಕೆ ಮರಳಿದ್ದರು. ಆದರೆ, ಪಕ್ಷದಿಂದ ಟಿಕೆಟ್ ನಿರಾಕರಿಸಲ್ಪಟ್ಟು, ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಕ್ಕಾಗಿ 2014ರಲ್ಲಿ ಅವರನ್ನು ಮತ್ತೆ ಉಚ್ಚಾಟಿಸಲಾಗಿತ್ತು. ರಾಜಕೀಯ ಜೀವನದಲ್ಲಿ ಹಲವಾರು ಏರಿಳಿತ ಕಂಡಿದ್ದ ಅವರು, ಕಂದಹಾರ್ ಹೈಜಾಕ್ ಪ್ರಕರಣದಲ್ಲಿ ವಹಿಸಿದ್ದ ಪಾತ್ರ ಬಹು ಚರ್ಚೆಗೆ ಕಾರಣವಾಗಿತ್ತು. ಐ.ಸಿ. 814 ವಿಮಾನವನ್ನು ಕಠ್ಮಂಡುವಿನಿಂದ ಆಫ್ಘಾನಿಸ್ತಾನದ ಕಂದಹಾರ್‌ಗೆ 1999ರಂದು ಅಪಹರಿಸ ಲಾಗಿತ್ತು. ಅದರಲ್ಲಿ 161 ಪ್ರಯಾಣಿಕರಿದ್ದರು. ಈ ಪ್ರಕರಣ ನಿಭಾಯಿಸಿದ್ದು ಅತಿ ಹೆಚ್ಚು ಟೀಕೆ ಪಡೆದಿದ್ದ ಹಾಗೂ ಭಾವನಾತ್ಮಕವಾಗಿ ನಿತ್ರಾಣಗೊಳಿಸಿದ್ದಾಗಿತ್ತು ಎಂದು ಸಿಂಗ್ ಹೇಳಿದ್ದರು.**

ಸಿಂಗ್ ನಿಧನಕ್ಕೆ ಸಂತಾಪ ಸಲ್ಲಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಜಸ್ವಂತ್ ಸಿಂಗ್ ಅವರು ದೇಶಕ್ಕೆ ಅವಿರತ ಸೇವೆ ಸಲ್ಲಿಸಿದ್ದಾರೆ. ಮೊದಲು ಸೈನಿಕರಾಗಿ ಹಾಗೂ ನಂತರದಲ್ಲಿ ಸುದೀರ್ಘ ಕಾಲ ರಾಜಕಾರಣದಲ್ಲಿ ಸೇವೆಗೈದಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ ಅವರ ಅವಧಿಯಲ್ಲಿ ಅವರು ಮಹತ್ವದ ಖಾತೆಗಳನ್ನು ನಿಭಾಯಿಸಿದ್ದರು. ಅವರು ಹಣಕಾಸು, ರಕ್ಷಣೆ ಹಾಗೂ ವಿದೇಶಾಂಗ ವ್ಯವಹಾರಗಳಲ್ಲಿ ತಮ್ಮ ಛಾಪು ಬಿಟ್ಟು ಹೋಗಿದ್ದಾರೆ ಎಂದು ತಿಳಿಸಿದ್ದಾರೆ.

ಸೈನಿಕ ಅಧಿಕಾರಿಯಾಗಿ, ಬರಹಗಾರರಾಗಿ, ಕೇಂದ್ರ ಸಚಿವರಾಗಿ ಅವರು ಹಲವಾರು ವಲಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 1999ರಲ್ಲಿ ಅವರು ವಿದೇಶಾಂಗ ವ್ಯವಹಾರಗಳ ಸಚಿವರಾಗಿದ್ದಾಗ ಕಂದಹಾರ್ ಹೈಜಾಕ್ ಬಿಕ್ಕಟ್ಟು ನಿಭಾಯಿಸಿದ್ದು ಅದೆಲ್ಲವನ್ನೂ ಮೀರಿತ್ತು.

ವಾಜಪೇಯಿ ಹಾಗೂ ಹಿರಿಯ ನಾಯಕ ಎಲ್.ಕೆ.ಅದ್ವಾನಿ ಅವರಿಗೆ ನಿಕಟವರ್ತಿಯಾಗಿದ್ದ ಸಿಂಗ್, ರಕ್ಷಣೆ, ವಿದೇಶಾಂಗ ವ್ಯವಹಾರಗ, ಹಣಕಾಸು ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಸ್ಥಾನಗಳನ್ನು ವಾಜಪೇಯಿ ಸರ್ಕಾರದಡಿ ನಿಭಾಯಿಸಿದ್ದರು.

ಜನವರಿ 3, 1938ರಲ್ಲಿ ಬರ್ಮಾರ್ ಜಿಲ್ಲೆಯ ಜಸೋಲ್ ಹಳ್ಳಿಯಲ್ಲಿ ಜನಿಸಿದ್ದ ಅವರು, 1950ರಿಂದ 60ರ ನಡುವೆ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದರು. ನಂತರ ರಾಜಕೀಯಕ್ಕೆ ಧುಮುಕಲು ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ನಂತರದಲ್ಲಿ ಲೋಕಸಭೆ ಹಾಗೂ ರಾಜ್ಯಸಭೆಗಳಿಗೆ ಹಲವು ಬಾರಿ ಆಯ್ಕೆಯಾಗಿದ್ದರು.

ಜೈಷ್ ಎ ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಝರ್ ಸೇರಿದಂತೆ ಮೂವರು ಉಗ್ರರನ್ನು ಸಿಂಗ್ ಜೊತೆ ಕಳಿಸಿ, ಕಂದಹಾರ್‌ನಲ್ಲಿ ಒತ್ತೆಯಾಳುಗಳ ವಿನಿಮಯ ಮಾಡಿಕೊಳ್ಳಲಾಗಿತ್ತು.

ನಾನು ಹೆಣ್ಣು ಮಗುವಿನ ತಾತನಾದ ಒಂದು ಗಂಟೆಯಲ್ಲೇ ಅಪಹರಣ ನಡೆದಿತ್ತು. ಉಗ್ರರನ್ನು ವಿನಿಮಯ ಮಾಡಿಕೊಂಡಿದ್ದು ಕಠಿಣ ನಿರ್ಧಾರವಾಗಿತ್ತು. ನಾನು ಆರಂಭದಿಂದಲೂ ಹೊಂದಾಣಿಕೆಗೆ ವಿರುದ್ಧವಾಗಿದ್ದೆ. ಆದರೆ ಸಮಯ ಕಳೆದಂತೆ ನಿಧಾನವಾಗಿ ಬದಲಾಗಿದ್ದಾಗಿ ಅವರು ತಿಳಿಸಿದ್ದರು.

ಸಿಂಗ್ ಪಕ್ಷಾತೀತವಾಗಿ ನಿಕಟ ಸಂಬಂಧಗಳನ್ನು ಹೊಂದಿದ್ದರು. ರಾಜಕೀಯ ವಲಯದಲ್ಲಿ ಸಭ್ಯ ಹಾಗೂ ವಿದ್ವಾಂಸರಾಗಿದ್ದರು. ಆದರೆ, ತಮ್ಮ ನಿಲುವು ತಿಳಿಸಲು ಎಂದೂ ಹಿಂಜರಿಯುತ್ತಿರಲಿಲ್ಲ.


**ಶರತ್ ಋತುಪಾನ ವಿಶೇಷ ಚಿಕಿತ್ಸಾ ಶಿಬಿರ**

ಅಶ್ವಯುಜ-ಕಾರ್ತಿಕ ಮಾಸದವರಿಗೆ (ಸೆಪ್ಟೆಂಬರ್ ಮಧ್ಯದಿಂದ-ಡಿಸೆಂಬರ್ ಮಧ್ಯ) ಬರುವಂತಹ ಕಾಲಕ್ಕೆ ಶರತ್ ಋತು ಆಗಮಿಸುತ್ತದೆ. ಈ ಕಾಲದಲ್ಲಿ ಪಿತ್ತ-ರಕ್ತದಿಂದ ಆಗುವಂತಹ ತೊಂದರೆಗಳಾದ ಬಾಯಿಹುಣ್ಣು, ಕುರುಗಡ್ಡೆ, ತಲೆನೋವು, ಮುಟ್ಟಿನ ಸಮಸ್ಯೆ ಮತ್ತು ಇನ್ನೂ ಅನೇಕ ಚರ್ಮ ವ್ಯಾಧಿಗಳು ಈ ಕಾಲದಲ್ಲಿ ಅಧಿಕವಾಗಿ ಕಂಡುಬರುತ್ತವೆ. ಈ ರೋಗಗಳಿಗೆ ಶರತ್‌ಋತುವಿನಲ್ಲಿ ಚಿಕಿತ್ಸೆ ಪಡೆದರೆ ವಿಶೇಷ ಲಾಭ ಲಭಿಸುತ್ತದೆ. ಇದರ ಅನ್ವಯ ಈ ಋತುವಿನಲ್ಲಿ ಅನುಸರಿಸಬೇಕಾದ ನಿಯಮಗಳು ಮತ್ತು ಚಿಕಿತ್ಸೆಗಳನ್ನು ತಿಳಿದುಕೊಳ್ಳಲು ಇಂದೇ ಸಂಪರ್ಕಿಸಿರಿ :

ANVAYA **ಅನ್ವಯ ಆಯುರ್ವೇದ ಆಸ್ಪತ್ರೆ**

#1981, 10ನೇ ಕ್ರಾಸ್, ಆಶ್ರಯ ಆಸ್ಪತ್ರೆ ಹಿಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.

☎ 08192-252228, 8618642929, www.anvayayurveda.com

ಈ ಚೀಟಿಯನ್ನು ತಂದವರಿಗೆ ಶೇಕಡ 10% ರಿಯಾಯಿತಿ ದೊರೆಯುತ್ತದೆ


**ಸಾರ್ವಜನಿಕ ನೋಟಿಸ್**

ನಮ್ಮ ಕಕ್ಷಿದಾರರಾದ **ಶ್ರೀ ಉದಯಶಿವಕುಮಾರ್ ಬಿನ್ ರಾಜಣ್ಣ,** ವಾಸ : # 1924ಎ/196, ಬನಶಂಕರಿ ಬಡಾವಣೆ, ದಾವಣಗೆರೆ ಇವರ ಪರವಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ದಾವಣಗೆರೆ ವಿದ್ಯಾನಗರ # 1905/1 ರ ವಾಸಿಯಾದ **ಶ್ರೀಮತಿ ಶಶಿರೇಖ ಕೋಂ ಸೋಮಸುಂದರ್** ಇವರು ಷೆಡ್ಯೂಲ್‌ನಲ್ಲಿ ಕಾಣಿಸಿರುವ ಆಸ್ತಿಯನ್ನು ನಮ್ಮ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿ, ಕ್ರಯದ ಕರಾರನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಷೆಡ್ಯೂಲ್ ಆಸ್ತಿಯನ್ನು ಸದರಿ ಶ್ರೀಮತಿ ಶಶಿರೇಖಾರವರು ನಮ್ಮ ಕಕ್ಷಿದಾರರಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರೂ ಸಹ, ಸದರಿ ಸಂಗತಿಯನ್ನು ಮರೆಮಾಚಿ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ನಮ್ಮ ಕಕ್ಷಿದಾರರಿಗೆ ತಿಳಿದುಬಂದಿರುತ್ತದೆ, ಆ ಕಾರಣ ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಆಸ್ತಿಯ ಬಗ್ಗೆ ಸದರಿ ಶಶಿರೇಖ ಕೋಂ ಸೋಮಸುಂದರ್ ಅಥವಾ ಅವರಿಂದ ಅಧಿಕಾರ ಪಡೆದ ಯಾವುದೇ ವ್ಯಕ್ತಿಯಿಂದಾಗಲೀ ಯಾವುದೇ ರೀತಿಯ ಕ್ರಯ, ದಾನ, ಅದಲು ಬದಲು, ವಗೈರೆ ಪರಭಾರೆ ಅಥವಾ ಇತರೆ ಯಾವುದೇ ರೀತಿಯ ವ್ಯವಹಾರವನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಷೆಡ್ಯೂಲ್ ಆಸ್ತಿಯ ಬಗ್ಗೆ ಯಾವುದೇ ರೀತಿಯ ವ್ಯವಹಾರ ಮಾಡಿದ್ದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿಗಾರರ ಹಕ್ಕಿಗೆ ಬಾಧಕವಾಗುವುದಿಲ್ಲವೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ರಿ. ಸರ್ವೆ ನಂ. 211/1ಪಿ, ವಿಸ್ತೀರ್ಣ 1 ಎಕರೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಲಿಂಗರಾಜ್ ಇವರ ಜಮೀನು, ಪಶ್ಚಿಮಕ್ಕೆ : ಬಿಂದಪ್ಪ ಬಸವಲಿಂಗಪ್ಪನವರ ಜಮೀನು, ಉತ್ತರಕ್ಕೆ : ದಾರಿ, ದಕ್ಷಿಣಕ್ಕೆ : ಶಿರಮಗೊಂಡನಹಳ್ಳಿ ದಾರಿ.

**ಸಹಿ/- (ಎ.ಎಂ. ಹೆಗಡೆ)**
ವಕೀಲರು,
ದಾವಣಗೆರೆ-577 002.
**ಮೊ : 94483 05888**

## ನೇರ್ಲಿಗಿಯಲ್ಲಿ ಇಂದು ಡಾ. ಮಂಜುನಾಥ ಗೌಡರಿಗೆ ಶ್ರದ್ಧಾಂಜಲಿ

ಈಚೆಗೆ ನಿಧನರಾದ 22 ಕೆರೆಗಳ ಹೋರಾಟ ಸಮಿತಿಯ ಅಧ್ಯಕ್ಷ ಡಾ. ಮಂಜುನಾಥ ಗೌಡ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮವು ನೇರ್ಲಿಗಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ.

ಈ ಕಾರ್ಯಕ್ರಮವನ್ನು ನೇರ್ಲಿಗಿ ಗ್ರಾಮಸ್ಥರು ಹಮ್ಮಿಕೊಂಡಿದ್ದು, ಕಾರ್ಯಕ್ರಮಕ್ಕೆ ಸುತ್ತಮುತ್ತಲ ಗ್ರಾಮಗಳ ರೈತ ಬಾಂಧವರು ಆಗಮಿಸಲು ಗ್ರಾಮಸ್ಥರು ವಿನಂತಿಸಿದ್ದಾರೆ.

ಅಧ್ಯಕ್ಷತೆಯನ್ನು ದೊಡ್ಡಗೌಡ್ರ ಸಿದ್ದಪ್ಪ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಾ. ಜಯಚಂದ್, ತುಪ್ಪದಹಳ್ಳಿ ಶಿವಕುಮಾರ್, ಚಂದ್ರಾನಾಯ್ಕ, ಅಶೋಕ್ ಆಗಮಿಸುವರು. ಅತಿಥಿಗಳಾಗಿ ಗ್ರಾಮಸ್ಥರಾದ ಎನ್.ಜಿ. ವಿಜಯಕುಮಾರ್, ಎನ್.ಜಿ. ಸ್ವಾಮಿ, ಉಮಾಪತಿ, ಜಿ.ಕೆ. ನಾಗರಾಜ್, ಎನ್.ಎಸ್. ಜಯಪ್ಪ ಭಾಗವಹಿಸಲಿದ್ದಾರೆ.

# ಕ್ಯಾನ್ಸರ್ ಮುಕ್ತ ಆರ್.ಟಿ.ಅರುಣ್ ಈಗ ಕೋವಿಡ್ ಮುಕ್ತ



ದಾವಣಗೆರೆ, ಸೆ.27- ಬರುವ ಅಕ್ಟೋಬರ್ 10ರ ಶನಿವಾರ ಜಾಗತಿಕವಾಗಿ ಕ್ಯಾನ್ಸರ್ ಜಾಗೃತಿ ಅಭಿಯಾನ ನಡೆಯುತ್ತಿದ್ದು, ಹೈದರಾಬಾದ್‌ನ ಗ್ರೇಸ್ ಫೌಂಡೇಷನ್ ಜೊತೆ ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ಕೈ ಜೋಡಿಸಲಿದೆ. ಎಲ್ಲೆಡೆ ಕೋವಿಡ್ ಹಿನ್ನೆಲೆಯನ್ನು ಪರಿಗಣಿಸಿ, ಈ ಬಾರಿ ಜಾಗೃತಿ ಅಭಿಯಾನವನ್ನು ಪರೋಕ್ಷವಾಗಿ ನಡೆಸಲಾಗುತ್ತಿದ್ದು, ಕ್ಯಾನ್ಸರ್ ಜೊತೆಗೆ ಕೋವಿಡ್ ಅನ್ನೂ ಹಿಮ್ಮೆಟ್ಟಿಸಬಹುದು ಎಂಬ ಜಾಗೃತಿಯನ್ನು ಮೂಡಿಸಲಾಗುವುದು ಎಂದು ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ನಿನ ಡಾ.ಶ್ರೀಶೈಲ್ ಬ್ಯಾಡಗಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಹಿರಿಯ ವೈದ್ಯ ದಾವಣಗೆರೆ ಕ್ಯಾನ್ಸರ್ ಫೌಂಡೇಷನ್ ನಿರ್ದೇಶಕ ಡಾ.ಎ.ಎಂ.ಶಿವಕುಮಾರ್ ಮಾರ್ಗದರ್ಶನದಲ್ಲಿ ಜಾಗೃತಿ ಗೀತೆಯೊಂದನ್ನು ಸಿದ್ಧಪಡಿಸಲಾಗಿದ್ದು, ಅದರ ಬಹುತೇಕ ಚಿತ್ರೀಕರಣವನ್ನು ಮಾಡಲಾಗಿದೆ ಎಂದು ಕಲಾವಿದ ಆರ್.ಟಿ.ಅರುಣ್ ಕುಮಾರ್ ತಿಳಿಸಿದ್ದಾರೆ.

ಇಷ್ಟರಲ್ಲಿಯೇ ಅದರ ಸಂಕಲನ ಕಾರ್ಯ ಮುಗಿಯಲಿದ್ದು, ಎಲ್ಲಾ ಸೋಷಿಯಲ್ ಮೀಡಿಯಾಗಳ ಮತ್ತು ಸ್ಥಳೀಯ ಕೇಬಲ್ ವಾಹಿನಿಗಳ ಮೂಲಕ ಈ ಕೋವಿಡ್-ಕ್ಯಾನ್ಸರ್ ಜಾಗೃತಿ ಗೀತೆಯನ್ನು ಬಿಡುಗಡೆ ಮಾಡಲಾಗುವುದು ಎಂದು ಆರ್.ಟಿ. ಹೇಳಿದ್ದಾರೆ.

ಈ ಬಾರಿಯ ಪರೋಕ್ಷ ಅಭಿಯಾನವನ್ನು ಕೆಲವು ಸಂಸ್ಥೆಗಳು ತಮ್ಮ ತಮ್ಮ ಸ್ಥಳಗಳಲ್ಲಿಯೇ ನಡೆಸುತ್ತಿದ್ದು, ಈ ಕಾರ್ಯಕ್ಕೆ ನಗರದ ಐ.ಎಂ.ಎ, ಇಂಡಿಯನ್ ರೆಡ್ ಕ್ರಾಸ್ ಅಸೋಸಿಯೇಷನ್, ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹ, ಲೈಫ್ ಲೈನ್, ರೋಟರಿ ಸಂಸ್ಥೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವರದಿಗಾರರ ಕೂಟ ಕೈ ಜೋಡಿಸಲಿವೆ.

ಕ್ಯಾನ್ಸರ್ ಮುಕ್ತ ಆರ್.ಟಿ.ಅರುಣ್ ಈಗ ಕೋವಿಡ್ ಮುಕ್ತರಾಗಿ ಸುದ್ದಿಯಲ್ಲಿದ್ದಾರೆ. ಕಳೆದ ಮೂರು ವಾರಗಳಿಂದ ಕೋವಿಡ್ ಸೋಂಕಿಗೆ ಒಳಗಾಗಿದ್ದ ಆರ್.ಟಿ.ಅರುಣ್ ಉಸಿರಾಟದ ತೊಂದರೆಯಿಂದಾಗಿ ಎರಡು ವಾರಗಳ ಹಿಂದೆ ಸುಕ್ಷೇಮ ಆಸ್ಪತ್ರೆಗೆ ದಾಖಲಾಗಿದ್ದರು.

ಡಾ.ಸುನಿಲ್ ಬ್ಯಾಡಗಿ ನೇತೃತ್ವದಲ್ಲಿ ಶ್ವಾಸಕೋಶ ತಜ್ಞ ಡಾ. ಸಿ.ನಂದೀಶ್, ಫಿಜಿಷಿಯನ್ ಡಾ. ಬಿ.ಜಿ.ರೇಣುಕಾ ಮತ್ತು ಡಾ.ನಾಗರಾಜ್ ಅವರ ಚಿಕಿತ್ಸೆಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಆರ್.ಟಿ., ಈಗ ಕೋವಿಡ್ ಮುಕ್ತರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಆದರೂ ಇನ್ನೂ ಎರಡು ವಾರಗಳ ಕಾಲ ಅವರು ಕ್ವಾರಂಟೈನ್‌ನಲ್ಲಿ ಇರಬೇಕಿದ್ದು, ಅವರ ಆರೋಗ್ಯ ಕುರಿತು ಗಮನ ವಹಿಸಲಾಗುವುದು ಎಂದು ಡಾ.ಸುನಿಲ್ ಬ್ಯಾಡಗಿ ತಿಳಿಸಿದ್ದಾರೆ.

ಕೋವಿಡ್ ಚಿಕಿತ್ಸೆಯ ಅನುಭವ ಸ್ವಲ್ಪ ಬೆಚ್ಚಿ ಬೀಳಿಸುವಂತಹದ್ದು. ಆದರೆ, ಭಯಪಡಬೇಕಾಗಿಲ್ಲ. ಸಾಮಾನ್ಯವಾಗಿ ಈ ಸೋಂಕು ಬಹುತೇಕರಿಗೆ ತಗಲುವ ಸಾಧ್ಯತೆಯಿದ್ದು, ಎಲ್ಲರೂ ಇದನ್ನು ಎದುರಿಸುವ ಧೈರ್ಯ ತೋರಿಸಲೇಬೇಕಾಗಿದೆ. ಯಾರೂ ಅನಾವಶ್ಯಕ ಹೆದರಬೇಕಿಲ್ಲ, ಅಲಕ್ಷ್ಯವನ್ನು ತೋರುವಂತಿಲ್ಲ ಎಂದು ಅರುಣ್ ಕುಮಾರ್ ತಿಳಿಸಿದ್ದಾರೆ.

## ಹರಪನಹಳ್ಳಿ ತಾ।। ನಾಯಕ ನೌಕರರ ಸಂಘಕ್ಕೆ ಜಿ. ಕಾಂತರಾಜ್ ಆಯ್ಕೆ



ಹರಪನಹಳ್ಳಿ, ಸೆ.27- ತಾಲ್ಲೂಕು ವಾಲ್ಮೀಕಿ ನಾಯಕ ನೌಕರರ ಸಂಘದ ಅಧ್ಯಕ್ಷರಾಗಿ ಜಿ.ಕಾಂತರಾಜ್ ಆಯ್ಕೆಯಾಗಿದ್ದಾರೆ.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ನಡೆದ ಸಭೆಯಲ್ಲಿ ವಾಲ್ಮೀಕಿ ನೌಕರರ ಸಂಘದ ಪದಾಧಿಕಾರಿಗಳ ಪುನರ್ ರಚನೆ ಮಾಡಲಾಯಿತು.

ಗೌರವಾಧ್ಯಕ್ಷರಾಗಿ ರೇವಣಸಿದ್ದಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಜಿ.ನಾಗಪ್ಪ, ಖಜಾಂಚಿಯಾಗಿ ಬಸವರಾಜ ಗುಂಡಿ ಆಯ್ಕೆಯಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ನೌಕರರ ಸಂಘದ ಪರಿಷತ್ ಸದಸ್ಯ ಬಸವರಾಜ ಸಂಗಪ್ಪನವರ ತಿಳಿಸಿದ್ದಾರೆ.

## ಉಮಾ ಭಾರತಿಗೆ ಕೊರೊನಾ ಸೋಂಕು



ಡೆಹರಾಡೂನ್, ಸೆ. 27 – ಮಾಜಿ ಕೇಂದ್ರ ಸಚಿವೆ, ಬಿಜೆಪಿ ನಾಯಕಿ ಉಮಾ ಭಾರತಿ ಅವರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಅವರು ಸ್ವಯಂ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ. ಉಮಾ ಭಾರತಿ ಇತ್ತೀಚೆಗೆ ಹಿಮಾಲಯ ಪ್ರವಾಸಕ್ಕೆ ತೆರಳಿದ್ದರು. ಪ್ರವಾಸದ ವೇಳೆ ಅಂತರ ಕಾಯ್ದುಕೊಂಡಿದ್ದರೂ ಸೋಂಕು ಬಂದಿದೆ. ತಮ್ಮ ನಿಕಟವರ್ತಿಗಳಾಗಿದ್ದವರು ಎಚ್ಚರಿಕೆ ವಹಿಸಿ ಪರೀಕ್ಷೆಗೆ ಒಳಗಾಗಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

## ವ್ಯಾಸರಾಜ್ ವೆಂಕಟರಮಣ ಭಂಡಾರ ನಿಧಿ ಅಧ್ಯಕ್ಷ



ಹರಪನಹಳ್ಳಿ, ಸೆ.27- ಪಟ್ಟಣದ ಶ್ರೀ ವೆಂಕಟರಮಣ ಪರ್ಮನೆಂಟ್ ಭಂಡಾರ ನಿಧಿ ಲಿಮಿಟೆಡ್‌ನ ಅಧ್ಯಕ್ಷರಾಗಿ ಟಿ.ವ್ಯಾಸರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಅಧ್ಯಕ್ಷರಾಗಿದ್ದ ದಿವಾಕರ ಸೋಮಯಾಜಿರವರು ಅನಾರೋಗ್ಯದ ನಿಮಿತ್ತ ಅಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಟಿ.ವ್ಯಾಸರಾಜ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ನಿರ್ದೇಶಕರುಗಳಾದ ಗುಡಿಬಿಂದು ಮಾಧವ ಟಿ.ಎಂ.ಚಂದೂಧರ, ಯು. ದತ್ತಾತ್ರೇಯ ಭಟ್, ಎಲ್.ಬಸವರಾಜ್, ಬಿ.ಮಾಧವರಾವ್, ಕಛೇರಿಯ ಸಿಬ್ಬಂದಿಗಳಾದ ಹಿರಿಯ ಲೆಕ್ಕ ಪರಿಶೋಧಕ ಎಸ್.ಶ್ಯಾಮ್‌ಸುಂದರ್ ಭಟ್, ಎ. ಶ್ರೀನಿವಾಸ್, ವೈದ್ಯ ವಾದಿರಾಜ್, ಲಕ್ಷ್ಮಿನಾರಾಯಣ್, ಮಂಚಾಲಿ ಸುರೇಂದ್ರ, ಮೈದೂರು ಪ್ರಕಾಶ್ ಉಪಸ್ಥಿತರಿದ್ದರು.

## ದಿನೇಶ್ ಗುಂಡೂರಾವ್‌ಗೆ ಕೊರೊನಾ ಪಾಸಿಟಿವ್



ಬೆಂಗಳೂರು, ಸೆ. 27 - ತಮಗೆ ಕೊರೊನಾ ಸೋಂಕು ಬಂದಿರುವುದಾಗಿ ಕಾಂಗ್ರೆಸ್ ನಾಯಕ ಹಾಗೂ ಶಾಸಕ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಹತ್ತು ದಿನಗಳ ಕಾಲ ಕ್ವಾರಂಟೈನ್‌ನಲ್ಲಿರುವುದಾಗಿ ತಿಳಿಸಿದ್ದಾರೆ. ತನ್ನಲ್ಲಿ ಯಾವುದೇ ರೋಗ ಲಕ್ಷಣಗಳಿಲ್ಲ. ನಿಮ್ಮೆಲ್ಲರ ಶುಭ ಹಾರೈಕೆಗಳಿಂದಾಗಿ ಶೀಘ್ರವೇ ಚೇತರಿಸಿಕೊಳ್ಳುವುದಾಗಿ ಅವರು ಹೇಳಿದ್ದಾರೆ. ರಾವ್ ನಿನ್ನೆ ವಿಧಾನಸಭಾ ಅಧಿವೇಶನದಲ್ಲಿದ್ದರು.

---

**ವೀರಶೈವ ಸಮಾಜದ ಹಿರಿಯ ಮುಖಂಡ ಎ.ಎಂ.ಮಲ್ಲಿಕಾರ್ಜುನಯ್ಯ ನಿಧನ**



ಹರಪನಹಳ್ಳಿ ತಾಲೂಕಿನ ವೀರಶೈವ ಸಮಾಜದ ಹಿರಿಯ ಮುಖಂಡ,
ಬಿ.ಇ.ಒ. ಕಚೇರಿಯ ನಿವೃತ್ತ ಪತ್ರಾಂಕಿತ ವ್ಯವಸ್ಥಾಪಕರಾದ

**ಎ.ಎಂ.ಮಲ್ಲಿಕಾರ್ಜುನಯ್ಯ(80)**

ಅವರು ಅನಾರೋಗ್ಯದಿಂದ ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ದಾವಣಗೆರೆ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರೇಣುಕಾರಾಧ್ಯ ಸೇರಿದಂತೆ ಇಬ್ಬರು ಪುತ್ರಿಯರು , ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಪಟ್ಟಣದ ಎಸ್.ಯು.ಜೆ.ಎಂ. ಕಾಲೇಜಿನ ಅಧ್ಯಕ್ಷರಾಗಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷರಾಗಿ, ಪುರಸಭಾ ಮಾಜಿ ನಾಮ ನಿರ್ದೇಶಕ ಸದಸ್ಯರಾಗಿ, ಕೊಟ್ಟೂರಿನ ಜಗದ್ಗುರು ರೇಣುಕಾಚಾರ್ಯರ ವಿದ್ಯಾ ಸಂಸ್ಥೆಯ ಗೌರವ ಅಧ್ಯಕ್ಷರಾಗಿ , ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿರ್ದೇಶಕರಾಗಿ, ಇಲ್ಲಿಯ ತೆಗ್ಗಿನಮಠದ ಲಿ. ಚಂದ್ರಮೌಳೀಶ್ವರ ಶ್ರೀಗಳ ವಜ್ರ ಮಹೋತ್ಸವ ಸಮಿತಿ ಅಧ್ಯಕ್ಷರಾಗಿ, ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲಾ ಲಿಪಿಕ ನೌಕರರ ಸಂಘದ ಉಪಾಧ್ಯಾಕ್ಷರಾಗಿ ಹೀಗೆ ಶಿಕ್ಷಣ ಕ್ಷೇತ್ರ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಗಳಲ್ಲಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಪ್ರಶಸ್ತಿಗಳು - ಮೃತರಿಗೆ ತೆಗ್ಗಿನಮಠ ಶ್ರೀ ಪ್ರಶಸ್ತಿ, ಜಿಲ್ಲಾ ಲಿಪಿಕ ನೌಕರರ ಪ್ರಶಸ್ತಿ ಲಭಿಸಿವೆ. ಮೃತರ ಅಂತ್ಯಕ್ರಿಯೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಸಂಜೆ ಜರುಗಿತು.

ಇಂತಿ ದುಖಿ ತಪ್ತರು

ಡಾ.ರೇಣುಕಾರಾಧ್ಯ, ದಾವಣಗೆರೆ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಹಾಗೂ ಕುಟುಂಬ ವರ್ಗ .

---



**ದಿ|| ಕೋಗುಂಡಿ ಕೊಟ್ರಪ್ಪನವರ ಹಿರಿಯ ಪುತ್ರಿ**

**ಬೇತೂರು ವೀರಮ್ಮ ನಿಧನ**

ದಾವಣಗೆರೆಯ ದಿ|| ಬೇತೂರು ನಾಗಪ್ಪ ಅವರ ಧರ್ಮಪತ್ನಿ **ಶ್ರೀಮತಿ ಬೇತೂರು ವೀರಮ್ಮ** ಅವರು ದಿನಾಂಕ 27.09.2020ರ ಭಾನುವಾರ ಸಂಜೆ 7.35 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 88 ವರ್ಷ ವಯಸ್ಸಾಗಿತ್ತು. ಮೃತರ ಪಾರ್ಥಿವ ಶರೀರವನ್ನು ಅವರ ಕಿರಿಯ ಸಹೋದರರಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರೂ, ಕೈಗಾರಿಕೋದ್ಯಮಿಯೂ ಆದ ಶ್ರೀ ಕೋಗುಂಡಿ ಬಕ್ಕೇಶಪ್ಪ ಅವರ ಕೆ.ಬಿ. ಬಡಾವಣೆ 4ನೇ ಕ್ರಾಸ್ ನಲ್ಲಿರುವ ನಿವಾಸದಲ್ಲಿಡಲಾಗಿದ್ದು, ದಿನಾಂಕ 28.09.2020ರ ಸೋಮವಾರ ಮಧ್ಯಾಹ್ನ 12 ಕ್ಕೆ ದಾವಣಗೆರೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ

---

**6ನೇ ವರ್ಷದ ಚಿರಸ್ಮರಣೆ**



**ಶ್ರೀ ಸೋಮರಾಯ ನಾರಾಯಣ ಕುರ್ಡೇಕರ್ (ಪಲ್ಲಾಗಟ್ಟಿ)**

ಶ್ರೀ ಸೋಮೇಶ್ವರ ಜ್ಯೂಯಲರಿ ಮಾರ್ಟ್
ಚೌಕಿಪೇಟೆ, ದಾವಣಗೆರೆ.

ಶ್ರೀ ಓಂಕಾರ ಗಣಪತಿ ಜ್ಯೂಯಲರಿ ಮಾರ್ಟ್
ಚೌಕಿಪೇಟೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ರಾಧಾಬಾಯಿ ಸೋಮರಾಯ ಕುರ್ಡೇಕರ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

---

**ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ**

**ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)**

ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ - 577 004.

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು
ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ
ಶುಭಾಶೀರ್ವಾದಗಳೊಂದಿಗೆ



ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ಇದರ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಸಹಕಾರಿ ಧುರೀಣರೂ, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನ ಅಧ್ಯಕ್ಷರೂ, ನಮ್ಮ ಟ್ರಸ್ಟ್‌ನ ಟ್ರಸ್ಟಿಗಳೂ ಆದ

**ಶ್ರೀ ಎನ್.ಎ. ಮುರುಗೇಶ್**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಶ್ರೀ ಕೆ.ಎಂ. ಹೊಳಿಯಪ್ಪ, ಉಪಾಧ್ಯಕ್ಷರು
ಶ್ರೀ ಅಥಣಿ ವೀರಣ್ಣ, ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಎಂ.ಹೆಚ್. ನಿಜಾನಂದ, ಕಾರ್ಯದರ್ಶಿ

**ಟ್ರಸ್ಟಿಗಳು**

- ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಮಂತ್ರಿಗಳು, ಕರ್ನಾಟಕ ಸರ್ಕಾರ.
- ಶ್ರೀ ಆರ್. ರಮಾನಂದ
- ಶ್ರೀ ಕೆ.ಜಿ. ಸುಗಂಧರಾಜ್
- ಶ್ರೀ ಎಂ. ಮಹೇಶ್ಚಂದ್ರಬಾಬು
- ಶ್ರೀ ಎಂ.ವಿ. ವೀರೇಂದ್ರ
- ಶ್ರೀ ಎಸ್.ಕೆ. ವೀರಣ್ಣ
- ಶ್ರೀ ಬಿ.ಸಿ. ಉಮಾಪತಿ
- ಶ್ರೀ ಐ.ಪಿ. ಏಕೋರಾಮಾರಾಧ್ಯ
- ಶ್ರೀ ಆರ್. ವೆಂಕಟರೆಡ್ಡಿ
- ಶ್ರೀ ಬಿ.ಸಿ. ಶಿವಕುಮಾರ್
- ಶ್ರೀ ಎ.ಕೆ. ಪ್ರಶಾಂತ್
- ಶ್ರೀ ಎ.ವಿ. ಪ್ರಸಾದ್

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)ನ ಆಶ್ರಯದಲ್ಲಿ ನಡೆಯುವ ಎಲ್ಲಾ ಶಾಲಾ-ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕರ ವೃಂದ, ಸಿಬ್ಬಂದಿ ವೃಂದ ಹಾಗೂ ವಿದ್ಯಾರ್ಥಿಗಳು.

---

**ಭಾವಪೂರ್ಣ ಶ್ರದ್ಧಾಂಜಲಿ**



ದಿ: 27-9-2020ರಂದು ನಿಧನರಾದ ಹಿರಿಯರಾದ ಹರಪನಹಳ್ಳಿಯ ಬಿ.ಇ.ಒ. ಕಚೇರಿಯ ನಿವೃತ್ತ ವ್ಯವಸ್ಥಾಪಕರೂ, ಎಸ್.ಯು.ಜೆ.ಎಂ. ಕಾಲೇಜಿನ ಅಧ್ಯಕ್ಷರೂ, ಹರಪನಹಳ್ಳಿ ಪುರಸಭೆಯ ಮಾಜಿ ಸದಸ್ಯರೂ, ವಿವಿಧ ಪ್ರಶಸ್ತಿಗಳ ಪುರಸ್ಕೃತರೂ ಆದ


**ಶ್ರೀ ಎ.ಎಂ.ಮಲ್ಲಿಕಾರ್ಜುನಯ್ಯ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಹಾಗೂ ಬಂಧು-ಮಿತ್ರರಿಗೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಬಿ.ಎಂ.ನಂಜಯ್ಯನವರು, ಶ್ರೀ ಗುರು ರೇಣುಕಾ ರೈಸ್ ಇಂಡಸ್ಟ್ರೀಸ್, ಮಲೇಬೆನ್ನೂರು
- ಬಿ.ಎಂ.ಜಗದೀಶ್ವರ ಸ್ವಾಮಿ, ಪ್ರಥಮ ದರ್ಜೆ ಗುತ್ತಿಗೆದಾರರು.
- ಬಿ.ಎಂ.ವಾಗೀಶ್‌ಸ್ವಾಮಿ, ಸದಸ್ಯರು, ಜಿ.ಪಂ. ಭಾನುವಳ್ಳಿ ಕ್ಷೇತ್ರ.
- ಬಿ.ಎಂ. ಚನ್ನೇಶ್‌ಸ್ವಾಮಿ, ಸದಸ್ಯರು, ಪುರಸಭೆ, ಮಲೇಬೇನ್ನೂರು.

---

**ಭಾವಪೂರ್ಣ ಶ್ರದ್ಧಾಂಜಲಿ**



ದಿ: 27-9-20ರಂದು ನಿಧನರಾದ ಹಿರಿಯರಾದ

**ಶ್ರೀ ಎ.ಎಂ.ಮಲ್ಲಿಕಾರ್ಜುನ ಸ್ವಾಮಿ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಡಿ.ಎಂ.ಹನಗೋಡಿಮಠ್ ಮತ್ತು ಮಕ್ಕಳು ಹಾಗೂ ಕುಟುಂಬದವರು, ದಾವಣಗೆರೆ.

---

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 27.09.2020ರಂದು ಭಾನುವಾರ ನಿಧನರಾದ ನಮ್ಮೆಲ್ಲರ ಆತ್ಮೀಯ, ಸ್ನೇಹಜೀವಿ

**ಶ್ರೀ ದೊಗ್ಗಳ್ಳಿಗೌಡ್ರು ಪುಟ್ಟರಾಜು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಶ್ರೀ ವೆಂಕಟೇಶ್ವರ ಯವಕ ಸಂಘ (ರಿ.) ಮಾಗಾನಹಳ್ಳಿ
- ಶ್ರೀ ವೆಂಕಟೇಶ್ವರ ಮೀನು ಉತ್ಪಾದನಾ, ಮಾರಾಟ, ಸಂಸ್ಕರಣಾ ಸಹಕಾರ ಸಂಘ (ನಿ) ಮಾಗಾನಹಳ್ಳಿ
- ಟಿ. ಅಂಜಿಬಾಬು
- ಬಿ.ಕೆ. ಮಂಜುನಾಥ್ ಮಾಗಾನಹಳ್ಳಿ
- ಡಿ. ಶೇಷಾಚಲ
- ಮಂಜುನಾಥ ಆರ್. ನಾಯ್ಕ
- ಬಿ.ಕೆ. ಪರಶುರಾಮ್ ಮಾಗಾನಹಳ್ಳಿ
- ಕೆ.ಜಿ. ಶಾಂತರಾಜ್ ಕಕ್ಕರಗೊಳ್ಳ
- ಬಿ. ಕರಿಬಸಪ್ಪ, ಜಿ.ಪಂ. ಮಾಜಿ ಸದಸ್ಯರು, ಎಲೆಬೇತೂರು.
- ಜಯರಾಜನಾಯ್ಕ
- ಯೋಗೇಶ್ ಹೊಸಕೇರಿಮಠ
- ಕಲ್ಲೇಶ್ ಕಕ್ಕರಗೊಳ್ಳ
- ರವಿ ಕೆ.
- ಯೋಗೇಶ್ ತೆಲಗಿ
- ಬಿ.ಎಂ. ಬಸಪ್ಪ
- ಕೆ.ಪಿ. ನಾಗರಾಜ್
- ಸೊಪ್ಪಿನ ಮಲ್ಲಪ್ಪ
- ದ್ಯಾಮಣ್ಣ ಕೆ.ಟಿ.
- ಶಿವಪ್ಪ
- ಡಿ.ಟಿ. ಬಸವರಾಜ್
- ಮಹಾಂತೇಶ್ ನ್ಯಾಯಬೆಲೆ ಅಂಗಡಿ
- ನೀಲಕಂಠ
- ಸುಣಗಾರ ಅಂಜಿನಿ
- ಪುರಂದರ ಲೋಕಿಕೆರೆ
- ಸಣ್ಣಬಾರಿಕರ ಬಾನಪ್ಪ
- ಐರಣಿ ಚಂದ್ರು
- ಸಿದ್ದಯ್ಯ ಒಡೆಯರ್
- ಡಾ. ಮಹೇಶ್ ಮೂಡಿ
- ಎಂ. ಗುರುಸಿದ್ಧಸ್ವಾಮಿ
- ಗಂಗಾಧರಸ್ವಾಮಿ
- ಆಲೂರು ರಾಜಶೇಖರ್
- ಎಲ್. ಪ್ರದೀಪ್, ದಿವ್ಯಾ ಟ್ರಾವೆಲ್ಸ್
- ಪ್ರವೀಣ್ ಎಲ್. ದಿವ್ಯಾ ಟ್ರಾವೆಲ್ಸ್

---

**ಹೃದಯ ಪೂರ್ವಕ ಅಭಿನಂದನೆಗಳು**



ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ಇದರ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ದಕ್ಷ, ಪ್ರಾಮಾಣಿಕ, ಯುವ ಸಹಕಾರಿ ಧುರೀಣರೂ, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನ ಅಧ್ಯಕ್ಷರೂ, ನಮ್ಮ ಆತ್ಮೀಯರೂ ಆದ

**ಶ್ರೀ ಎನ್.ಎ. ಮುರುಗೇಶ್**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಶ್ರೀಯುತರ ಅಧಿಕಾರವಧಿಯಲ್ಲಿ ಸಹಕಾರ ಯೂನಿಯನ್ ಇನ್ನಷ್ಟು ಅಭಿವೃದ್ಧಿಗೊಳ್ಳಲಿ ಎಂದು ಹಾರೈಸುವ....

ಆಡಳಿತ ಮಂಡಳಿ, ಆಡಳಿತಾಧಿಕಾರಿಗಳು, ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ

**ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಸಿ.ಬಿ.ಎಸ್.ಇ. / ಐ.ಸಿ.ಎಸ್.ಇ. ವಸತಿ ಶಾಲೆ ಮತ್ತು ಪಿ.ಯು. ವಿಜ್ಞಾನ ಕಾಲೇಜು**

ನಂ. 5335, 1ನೇ ಮುಖ್ಯರಸ್ತೆ, BIET ಕಾಲೇಜು ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ-04., ಫೋ: (08192) 263766, 264696, 264990

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte